ಓಂ ಕಂಸಾರಯೇ ನಮಃ
ಓಂ ಧೇನುಕಾರಯೇ ನಮಃ
ಓಂ ಶಿಶುಪಾಲರಿಪವೇ ನಮಃ
ಓಂ ಪ್ರಭವೇ ನಮಃ
ಓಂ ಯಶೋದಾನಂದನಾಯ ನಮಃ
ಓಂ ಶೌರಯೇ ನಮಃ 10
ಓಂ ಪುಂಡರೀಕನಿಭೇಕ್ಷಣಾಯ ನಮಃ
ಓಂ ದಾಮೋದರಾಯ ನಮಃ
ಓಂ ಜಗನ್ನಾಥಾಯ ನಮಃ
ಓಂ ಜಗತ್ಕರ್ತ್ರೇ ನಮಃ
ಓಂ ಜಗತ್ಪ್ರಿಯಾಯ ನಮಃ
ಓಂ ನಾರಾಯಣಾಯ ನಮಃ
ಓಂ ಬಲಿಧ್ವಂಸಿನೇ ನಮಃ
ಓಂ ವಾಮನಾಯ ನಮಃ
ಓಂ ಅದಿತಿನಂದನಾಯ ನಮಃ
ಓಂ ವಿಷ್ಣವೇ ನಮಃ 20
ಓಂ ಯದುಕುಲಶ್ರೇಷ್ಠಾಯ ನಮಃ
ಓಂ ವಾಸುದೇವಾಯ ನಮಃ
ಓಂ ವಸುಪ್ರದಾಯ ನಮಃ
ಓಂ ಅನನ್ತಾಯ ನಮಃ

Sri Vidyabharathi Book Centre, Sringeri

CC-O. In Public Domain. Digitized by eGangotri

ಓಂ ಕೈಟಭಾರಯೇ ನಮಃ
ಓಂ ಮಲ್ಲಜಿತೇ ನಮಃ
ಓಂ ನರಕಾಂತಕಾಯ ನಮಃ
ಓಂ ಅಚ್ಯುತಾಯ ನಮಃ
ಓಂ ಶ್ರೀಧರಾಯ ನಮಃ
ಓಂ ಶ್ರೀಮತೇ ನಮಃ 30
ಓಂ ಶ್ರೀಪತಯೇ ನಮಃ
ಓಂ ಪುರುಷೋತ್ತಮಾಯ ನಮಃ
ಓಂ ಗೋವಿಂದಾಯ ನಮಃ
ಓಂ ವನಮಾಲಿನೇ ನಮಃ
ಓಂ ಹೃಷೀಕೇಶಾಯ ನಮಃ
ಓಂ ಅಖಿಲಾರ್ತಿಘ್ನೇ ನಮಃ
ಓಂ ನೃಸಿಂಹಾಯ ನಮಃ
ಓಂ ದೈತ್ಯಶತ್ರವೇ ನಮಃ
ಓಂ ಮತ್ಸ್ಯದೇವಾಯ ನಮಃ
ಓಂ ಜಗನ್ಮಯಾಯ ನಮಃ 40
ಓಂ ಭೂಮಿಧಾರಿಣೇ ನಮಃ
ಓಂ ಮಹಾಕೂರ್ಮಾಯ ನಮಃ
ಓಂ ವರಾಹಾಯ ನಮಃ
ಓಂ ಪೃಥಿವೀಪತಯೇ ನಮಃ
ಓಂ ವೈಕುಂಠಾಯ ನಮಃ
ಓಂ ಪೀತವಾಸಸೇ ನಮಃ
ಓಂ ಚಕ್ರಪಾಣಯೇ ನಮಃ
ಓಂ ಗದಾಧರಾಯ ನಮಃ
ಓಂ ಶಙ್ಖಭೃತೇ ನಮಃ
ಓಂ ಪದ್ಮಪಾಣಯೇ ನಮಃ 50

ಓಂ ನನ್ದಕಿನೇ ನಮಃ
ಓಂ ಗರುಡಧ್ವಜಾಯ ನಮಃ
ಓಂ ಚತುರ್ಭುಜಾಯ ನಮಃ
ಓಂ ಮಹಾಸತ್ವಾಯ ನಮಃ
ಓಂ ಮಹಾಬುದ್ಧಯೇ ನಮಃ
ಓಂ ಮಹಾಭುಜಾಯ ನಮಃ
ಓಂ ಮಹಾತೇಜಸೇ ನಮಃ
ಓಂ ಮಹಾಬಾಹುಪ್ರಿಯಾಯ ನಮಃ
ಓಂ ಮಹೋತ್ಸವಾಯ ನಮಃ
ಓಂ ಪ್ರಭವೇ ನಮಃ 60
ಓಂ ವಿಷ್ವಕ್ಸೇನಾಯ ನಮಃ
ಓಂ ಶಾರ್ಙ್ಗಿಣೇ ನಮಃ
ಓಂ ಪದ್ಮನಾಭಾಯ ನಮಃ
ಓಂ ಜನಾರ್ದನಾಯ ನಮಃ
ಓಂ ತುಲಸೀವಲ್ಲಭಾಯ ನಮಃ
ಓಂ ಅಪರಾಯ ನಮಃ
ಓಂ ಪರೇಶಾಯ ನಮಃ
ಓಂ ಪರಮೇಶ್ವರಾಯ ನಮಃ
ಓಂ ಪರಮಕ್ಲೇಶಹಾರಿಣೇ ನಮಃ
ಓಂ ಪರತ್ರಸುಖದಾಯ ನಮಃ 70
ಓಂ ಪರಸ್ಮೈ ನಮಃ
ಓಂ ಹೃದಯಸ್ಥಾಯ ನಮಃ
ಓಂ ಅಮ್ಬರಸ್ಥಾಯ ನಮಃ
ಓಂ ಅಯಾಯ ನಮಃ
ಓಂ ಮೋಹದಾಯ ನಮಃ
ಓಂ ಮೋಹನಾಶನಾಯ ನಮಃ

Sri Vidyabharathi Book Centre, Sringeri

CC-O. In Public Domain. Digitized by eGangotri

ಓಂ ಸಮಸ್ತಪಾತಕಧ್ವಂಸಿನೇ ನಮಃ
ಓಂ ಮಹಾಬಲಬಲಾನ್ತಕಾಯ ನಮಃ
ಓಂ ರುಕ್ಮಿಣೀರಮಣಾಯ ನಮಃ
ಓಂ ರುಕ್ಮಿಣೀಪ್ರತಿಜ್ಞಾಖಂಡನಾಯ ನಮಃ
ಓಂ ಮಹತೇ ನಮಃ 80
ಓಂ ದಾಮಬದ್ಧಾಯ ನಮಃ
ಓಂ ಕ್ಲೇಶಹಾರಿಣೇ ನಮಃ
ಓಂ ಗೋವರ್ಧನಧರಾಯ ನಮಃ
ಓಂ ಹರಯೇ ನಮಃ
ಓಂ ಪೂತನಾರಯೇ ನಮಃ
ಓಂ ಮುಷ್ಟಿಕಾರಯೇ ನಮಃ
ಓಂ ಯಮುಳಾರ್ಜುನಭಞ್ಜನಾಯ ನಮಃ
ಓಂ ಉಪೇಂದ್ರಾಯ ನಮಃ
ಓಂ ವಿಶ್ವಮೂರ್ತಯೇ ನಮಃ 90
ಓಂ ವ್ಯೋಮಪಾದಾಯ ನಮಃ
ಓಂ ಸನಾತನಾಯ ನಮಃ
ಓಂ ಪರಮಾತ್ಮನೇ ನಮಃ
ಓಂ ಪರಬ್ರಹ್ಮಣೇ ನಮಃ
ಓಂ ಪ್ರಣತಾರ್ತಿವಿನಾಶನಾಯ ನಮಃ
ಓಂ ತ್ರಿವಿಕ್ರಮಾಯ ನಮಃ
ಓಂ ಮಹಾಮಾಯಾಯ ನಮಃ
ಓಂ ಯೋಗವಿದೇ ನಮಃ
ಓಂ ವಿಷ್ಟರಶ್ರವಸೇ ನಮಃ
ಓಂ ಶ್ರೀನಿಧಯೇ ನಮಃ 100
ಓಂ ಶ್ರೀನಿವಾಸಾಯ ನಮಃ
ಓಂ ಯಜ್ಞಭೋಕ್ತ್ರೇ ನಮಃ
ಓಂ ಸುಖಪ್ರದಾಯ ನಮಃ
ಓಂ ಯಜ್ಞೇಶ್ವರಾಯ ನಮಃ
ಓಂ ರಾವಣಾರಯೇ ನಮಃ
ಓಂ ಪ್ರಲಮ್ಬಘ್ನಾಯ ನಮಃ
ಓಂ ಅಕ್ಷಯಾಯ ನಮಃ
ಓಂ ಅವ್ಯಯಾಯ ನಮಃ 108

ಇತಿ ಶ್ರೀ ವಿಷ್ಣು ಅಷ್ಟೋತ್ತರ ಶತನಾಮಾವಳಿಃ ಸಂಪೂರ್ಣಂ

ಧೂಪಂ

ವನಸ್ಪತಿರಸೋದ್ಭೂತೋ ಗಂಧಾಡ್ಯೋ ಗಂಧ ಉತ್ತಮ
ಆಘ್ರೇಯಸ್ಸರ್ವದೇವಾನಾಂ ಧೂಪೋಯಂ ಪ್ರತಿಗೃಹ್ಯತಾಂ
ಶ್ರೀ ಸತ್ಯನಾರಾಯಣಸ್ವಾಮಿ ದೇವತಾಭ್ಯೋ ನಮಃ
ಧೂಪಮಾಘ್ರಾಪಯಾಮಿ ||

ತ್ರಿವರ್ತಿ ದೀಪಂ

ಸಾಜ್ಯಂ ತ್ರಿವರ್ತಿ ಸಂಯುಕ್ತಂ ವಹ್ನಿನಾಯೋಜಿತಂ ಮಯಾ |
ಗೃಹಾಣ ಮಂಗಳಂ ದೀಪಂ ತ್ರೈಲೋಕ್ಯ ತಿಮಿರಾಪಹ ||

Sri Vidyabharathi Book Centre, Sringeri

CC-O. In Public Domain. Digitized by eGangotri
ಭಕ್ತ್ಯಾದೀಪಂ ಪ್ರಯಚ್ಛಾಮಿ ದೇವಾಯ ಪರಮಾತ್ಮನೇ |
ತ್ರಾಹಿಮಾಂ ನರಕಾದ್ಘೋರಾತ್ ದಿವ್ಯಜ್ಯೋತಿ ನಮೋಸ್ತುತೇ
ಶ್ರೀ ಸತ್ಯನಾರಾಯಣಸ್ವಾಮಿ ದೇವತಾಭ್ಯೋನಮಃ
ಏಕಾರ್ತಿ ತ್ರಿವರ್ತಿ ದೀಪಂ ದರ್ಶಯಾಮಿ
ಧೂಪದೀಪಾನಂತರೇ ಆಚಮನಂ ಪರಿಮಳ ಪತ್ರ ಪುಷ್ಪಾಣಿ ಸಮರ್ಪಯಾಮಿ.

ನೈವೇದ್ಯಂ

ಘೃತಪಕ್ವಾ ಹವಿಷ್ಯಾನ್ನಂ ಪಾಯಸಂ ಚ ಸಶರ್ಕರಾ |
ನಾನಾವಿಧಂ ಚ ನೈವೇದ್ಯಂ ಹೇ ಸ್ವಾಮಿನ್ ಪ್ರತಿಗೃಹ್ಯತಾಂ ||
ಸರ್ವಪಾಪಹರಂ ರೂಪಂ ನಾನಾಫಲ ಸಮನ್ವಿತಂ |
ಮಯಾಹೃತಾನಿ ಪಕ್ವಾನಿ ಪ್ರೀತ್ಯರ್ಥಂ ಪ್ರತಿಗೃಹ್ಯತಾಂ ||
ಓಂ ವಿಶ್ವಾಮಿತ್ರಋಷಿಃ | ಸವಿತಾ ದೇವತಾ | ಗಾಯತ್ರಿ ಚ್ಛಂಧಃ | ಓಂ ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ ಧೀಯೋ ಯೋನಃ ಪ್ರಚೋ ದಯಾತ್ | ಸತ್ಯಂತ್ವರ್ತೇನ ಪರಿಷಿಂಚಾಮಿ ಕಾಮಧೇನು ಸ್ಮರಾಮಿ, ಅಮೃತಮಸ್ತು ಅಮೃತ ಮಸ್ತರಣಮಸೀಸ್ವಾಹಾ, ಓಂ ಪ್ರಾಣಾಯಸ್ವಾಹಾ, ಓಂ ಅಪಾನಾಯಸ್ವಾಹಾ, ಓಂ ವ್ಯಾನಾಯಸ್ವಾಹಾ, ಓಂ ಬ್ರಹ್ಮಣೇಸ್ವಾಹಾ, ಶ್ರೀ ಸತ್ಯನಾರಾಯಣಸ್ವಾಮಿನೇ ನಮಃ ನಾನಾವಿಧ ನೈವೇದ್ಯಂ ಸಮರ್ಪಯಾಮಿ, ಮಧ್ಯೇ ಮಧ್ಯೇ ಪಾನೀಯಂ ಸಮರ್ಪಯಾಮಿ, ಉತ್ತರಾಪೋಶನಂ ಸಮರ್ಪಯಾಮಿ, ಹಸ್ತಪ್ರಕ್ಷಾಳನಂ ಸಮರ್ಪಯಾಮಿ, ಪಾದ ಪ್ರಕ್ಷಾಳನಂ ಸಮರ್ಪಯಾಮಿ, ಪುನರಾಚಮನೀಯಂ ಸಮರ್ಪಯಾಮಿ.

ತಾಂಬೂಲಂ

ಏಲಾಲವಂಗ ಕರ್ಪೂರ ತಾಂಬೂಲಂ ಸುರಪೂಜಿತಂ |
ಪ್ರೀತ್ಯಾ ಗೃಹಾಣ ದೇವೇಶ ಮಮಸೌಖ್ಯಂ ವಿವರ್ಧಯೇ ||
ಪೂಗೀಫಲ ತಾಂಬೂಲಂ ಸಮರ್ಪಯಾಮಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸುವರ್ಣಪುಷ್ಪದಕ್ಷಿಣಾ

ಹಿರಣ್ಯಗರ್ಭ ಗರ್ಭಸ್ಥಂ ಹೇಮಬೀಜಂ ವಿಭಾವಸೋಃ ||
ಅನಂತ ಪುಣ್ಯ ಫಲದಂ ಅತಃಶ್ಯಾನ್ತಿಂ ಪ್ರಯಚ್ಛಮೇ ||
ಪೂಜಾಸಾಧ್ಯಹ್ನತಾಫಲ ಸಿದ್ಧ್ಯರ್ಥಂ ಸುವರ್ಣಪುಷ್ಪದಕ್ಷಿಣಾಂ ಸಮರ್ಪಯಾಮಿ.

ಫಲ ಸಮರ್ಪಣೆ

ಇದಂ ಫಲಂ ಮಯಾದೇವ ಸ್ಥಾಪಿತಂ ಪುರತಸ್ತವ |
ತೇನ ಮೇ ಸಫಲಾವಾಪ್ತಿಃ ಭವೇತ್ ಜನ್ಮನಿ ಜನ್ಮನಿ ||
ಪೂರ್ಣಫಲಂ ಸಮರ್ಪಯಾಮಿ

ಉತ್ತರ ನೀರಾಜನಂ

ಚಂದ್ರಾದಿತ್ಯ ಚ ಧರಣೀ ವಿದ್ಯುದಗ್ನಿಸ್ತ್ವಮೇವ ಹಿ ತ್ವಮೇವ ಸರ್ವ ಜ್ಯೋತೀಗ್ಂಷಿ ಭಜನೀರಾಜನಂ ಪ್ರಭೋ ಓಂ ಆಶಾಸ್ತೇಯಂ ಯಜಮಾನೋ ಸೌ | ಆಯುರಾಶಾಸ್ತೇ ಸುಪ್ರಜಾ ಸ್ತ್ವಮಾಶಾಸ್ತೇ | ಸಜಾತವನಸ್ಯಾಮಾಶಾಸ್ತೇ ಉತ್ತರಾಂ ದೇವಯಜ್ಯಮಾಶಾಸ್ತೇ | ಭೂಯೋಹವಿಷ್ಕರಣಮಾಶಾಸ್ತೇ ದಿವ್ಯಂಧಾಮಾಶಾಸ್ತೇ | ವಿಶ್ವಂ ಪ್ರಿಯಮಾಶಾಸ್ತೇ | ಯದನೇನ ಹವಿಷಾಶಾಸ್ತೇ | ತದಶ್ಯಾತ್ತದೃದ್ಧ್ಯಾತ್ | ತದಸ್ಮೈದೇವಾರಾಸಂತಾಮ್ ತದಗ್ನಿರ್ದೇವೋ ದೇವೇಭ್ಯೋ ವನತೇ | ವಯಮಗ್ನೇರ್ಮಾನುಷಾಃ |ಇಷ್ಟಂ ಚ ವೀತಂ ಚ ಉಭೇಚನೋ ದ್ಯಾವಾಪೃಥಿವೀ ಅಗ್ಂ ಹಸಸ್ಪಾತಾಂ | ಇಹಗತಿ ರ್ವಾಮಸ್ಯೇದಂಚ | ನಮೋದೇವೇಭ್ಯಃ ಸಾಂಗಾಯ, ಸಾಯುಧಾಯ, ಸವಾಹನಾಯ, ಸಪರಿವಾರಾಯ ಶ್ರೀ ಸತ್ಯನಾರಾಯಣಸ್ವಾಮಿನೇ ನಮಃ ಕರ್ಪೂರ ಮಂಗಳ ನೀರಾಜನಂ ದರ್ಶಯಾಮಿ| ನೀರಾಜನಾನಂತರೇ ಆಚಮನಂ, ಪರಿಮಳ ಪತ್ರ ಪುಷ್ಪಾಣಿ ಸಮರ್ಪಯಾಮಿ | ರಕ್ಷಾಂ ಧಾರಯಾಮಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಂತ್ರಪುಷ್ಪಂ

ಓಂ ಸಹಸ್ರಶೀರ್ಷಂ ದೇವಂ ವಿಶ್ವಾಕ್ಷಂ ವಿಶ್ವಶಂಭುವಂ ವಿಶ್ವಂ ನಾರಾಯಣಂ ದೇವಮಕ್ಷರಂ ಪರಮಂಪದಂ| ವಿಶ್ವತಃ ಪರಮಾನ್ನಿತ್ಯಂ| ವಿಶ್ವಂ ನಾರಾಯಣಗ್ಂ ಹರಿಂ| ವಿಶ್ವಮೇವೇದಂ ಪುರುಷಸ್ತದ್ವಿಶ್ವಮುಪಜೀವತಿ| ಪತಿಂ ವಿಶ್ವಸ್ಯಾತ್ಮೇ-ಶ್ವರಗ್ಂ ಶಾಶ್ವತಗ್ಂ ಶಿವಮಚ್ಯುತಂ ನಾರಾಯಣಂ ಮಹಾಜ್ಞೇಯಂ ವಿಶ್ವಾತ್ಮಾನಂ ಪರಾಯಣಂ| ನಾರಾಯಣ ಪರೋಜ್ಯೋತಿರಾತ್ಮಾನ್ನಾರಾಯಣ ಪರಃ | ನಾರಾಯಣ ಪರಬ್ರಹ್ಮ ತತ್ವನ್ನಾರಾಯಣಃ ಪರಃ | ಯಚ್ಚ-ಕಿಂಚಿಜ್ಜಗತ್ಸರ್ವಂದೃಶ್ಯತೇಶ್ರೂಯತೇಪಿವಾ | ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯನಾರಾಯಣ ಸ್ಥಿತಃ | ಅನಂತಮವ್ಯಯಂ ಕವಿಗ್ಂ ಸಮುದ್ರೇsತಂ ವಿಶ್ವಶಂಭುವಂ | ಪದ್ಮಕೋಶಃ ಪ್ರತೀಕಾಶಗ್ಂ ಹೃದಯಂ ಚಾಪ್ಯಧೋಮುಖಂ| ಅಧೋನಿಷ್ಟ್ಯಾವಿತಸ್ತ್ಯಾಂತೇ ನಾಭ್ಯಾಮುಪರಿತಿಷ್ಠತಿ| ಜ್ವಾಲಮಾಲಾಕುಲಂಬಾತಿ ವಿಶ್ವಸ್ಯಾಯತನಮ್ ಮಹತ್ | ಸಂತಗ್ಂ ಶಿಲಾಭಿಸ್ತು-ಲಂಬತ್ಯಾಕೋಶಸನ್ನಿಭಂ| ತಸ್ಯಾಂತೇ ಸುಷಿರಗ್ಂ ಸೂಕ್ಷ್ಮಂತಸ್ಮಿನ್‌ತತ್ಸರ್ವಂ ಪ್ರತಿಷ್ಠಿತಮ್ | ತಸ್ಯ ಮಧ್ಯೆ ಮಹಾ ನಗ್ನಿರ್ವಿಶ್ವಾರ್ಚಿರ್ವಿಶ್ವತೋಮುಖಃ | ಸೋಗ್ರಭುಗ್ವಿಭುಜನ್ ತಿಷ್ಠನ್ನಾಹಾರಮಜರಃ ಕವಿಃ | ತಿರ್ಯಗೂರ್ಧ್ವಮದಃ ಶಾಯೀ ರಶ್ಮಯಸ್ತಸ್ಯಸಂತತಾ | ಸಂತಾಪಯತಿಸ್ವಂದೇಹಮಾಪಾದತಲ-ಮಸ್ತಗಃ | ತಸ್ಯಮಧ್ಯೇವಹ್ನಿಶಿಖಾ ಅಣೀಯೋರ್ಧ್ವಾವ್ಯವಸ್ಥಿತಃ | ನೀಲ-ತೋಯದ ಮಧ್ಯಸ್ಥಾದ್ವಿದ್ಯುಲ್ಲೇಖೇವ ಭಾಸ್ವರಾ| ನೀವಾರ ಶೂಕವತ್ತನ್ವೀ ಪೀತಾ ಭಾಸ್ವತ್ಯಣೂಪಮಾ | ತಸ್ಯಾಶ್ಶಿಖಾಯಾ ಮಧ್ಯೇ ಪರಮಾತ್ಮಾ ವ್ಯವಸ್ಥಿತಃ | ಸಬ್ರಹ್ಮ ಸಶಿವಃ ಸಹರಿಃ ಸೇಂದ್ರಸ್ಸೋಕ್ಷರಃ ಪರಮಸ್ಸ್ವರಾಟ್ |

ಓಂ ತದ್ ಬ್ರಹ್ಮ, ಓಂ ತದ್ವಾಯುಃ, ಓಂ ತದಾತ್ಮಾ, ಓಂ ತತ್ಸತ್ಯಂ, ಓಂ ತತ್ಸರ್ವಂ ಓಂ ವಿತ್ಪುರೋನ್ನಮಃ | ಅಂತಶ್ಚರತಿ ಭೂತೇಷು ಗುಹಾಯಾಂ ವಿಶ್ವಮೂರ್ತಿಷ್ಮುತಂ ಯಜ್ಞಸ್ತ್ವಂ ವಷಟ್ಕಾರಸ್ತ್ವಮಿಂದ್ರಸ್ತ್ವಗ್ಂ ರುದ್ರಸ್ತ್ವಂ ವಿಷ್ಣುಸ್ತ್ವಂ ಬ್ರಹ್ಮತ್ವಂ ಪ್ರಜಾಪತಿಃ | ತ್ವಂ ತದಾಪ ಆಪೋಜ್ಯೋತಿರಸೋ

Sri Vidyabharathi Book Centre, Sringeri

CC-0. In Public Domain. Digitized by eGangotri

ಅಮೃತಂ ಬ್ರಹ್ಮ ಭೂರ್ಭುವಸ್ಸುವರೋಂ, ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ, ತನ್ನೋ ವಿಷ್ಣುಃ ಪ್ರಚೋದಯಾತ್ ||

ರಾಜಾಧಿರಾಜಾಯ ಪ್ರಸಹ್ಯಸಾಯಿನೇ | ನಮೋ ವಯಂ ವೈಶ್ರವಣಾಯ ಕುರ್ಮಹೇ ಸಮೇಕಾಮಾನ್ಕಾಮ ಕಾಮಾಯ ಮಹ್ಯಂ | ಕಾಮೇಶ್ವರೋ ವೈಶ್ರವಣೋ ದದಾತು, ಕುಬೇರಾಯ ವೈಶ್ರವಣಾಯ ಮಹಾರಾಜಾಯ ನಮಃ | ವೇದೋಕ್ತಮಂತ್ರಪುಷ್ಪಂ ಸಮರ್ಪಯಾಮಿ.

ಪ್ರದಕ್ಷಿಣ ನಮಸ್ಕಾರಂ

ಯಾನಿಕಾನಿಚ ಪಾಪಾನಿ ಜನ್ಮಾಂತರ ಕೃತಾನಿಚ ತಾನಿತಾನಿ ವಿನಶ್ಯಂತಿ ಪ್ರದಕ್ಷಿಣಂ ಪದೇ ಪದೇ, ಪಾಪೋಹಂ ಪಾಪಕರ್ಮಾಣಾಂ ಪಾಪಾತ್ಮಾ ಪಾಪಸಂಭವಮ್ ತ್ರಾಹಿಮಾಂ ಕೃಪಯಾದೇವ ಶರಣಾಗತ ಭಕ್ತವತ್ಸಲ ಅನ್ಯತಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ ತಸ್ಮಾತ್ ಕಾರುಣ್ಯ ಭಾವೇನ ರಕ್ಷ ರಕ್ಷೋ ಜನಾರ್ದನ.

ಪುನರರ್ಘ್ಯಂ

ಕಾವೇರಿ ತೀರಜಾ ತೋಯಂ ಕಪಿಲಾವಾರಿ ಮಿಶ್ರಿತಂ |
ಮಯಾ ನಿವೇದಿತೋ ಭಕ್ತ್ಯಾ ಅರ್ಘ್ಯೋಯಂ ಪ್ರತಿಗೃಹ್ಯತಾಂ ||
ಇದಮರ್ಘ್ಯಂ

ಪ್ರಾರ್ಥನಾಂ

ಸತ್ಯನಾರಾಯಣದೇವಂ ವಂದೇಹಂ ಕಾಮದಂ ಪ್ರಭುಂ |
ಲೀಲಯಾ ಸತತಂ ವಿಶ್ವಂ ಯೇನತಸ್ಮೈ ನಮೋ ನಮಃ ||
ಪ್ರಾರ್ಥನಾಂ ಸಮರ್ಪಯಾಮಿ.

ಉಪಾಯನದಾನಂ

ಪ್ರಾಣಾನಾಯಮ್ಯ, ಓಂ ಭೂಃ, ಓಂ ಭುವಃ, ಓಂ ಸುವಃ,
ಓಂ ಭೂರ್ಭುವಸ್ಸುವಃ.
ಮಯ ಆಚರಿತ ವ್ರತ ಫಲಸಿದ್ಧ್ಯರ್ಥಂ ಶ್ರೀ ಸತ್ಯನಾರಾಯಣ ಸ್ವರೂಪಾಯ ಬ್ರಾಹ್ಮಣಾಯ ಉಪಾಯನ ದಾನಂ ಅಹಂ ಕರಿಷ್ಯೇ.

Sri Vidyabharathi Book Centre, Sringeri

CC-O. In Public Domain. Digitized by eGangotri
ಶ್ರೀ ಸತ್ಯನಾರಾಯಣ ಸ್ವರೂಪಾಯ ಬ್ರಾಹ್ಮಣೇಭ್ಯಃ ಸ ಆವಾಹಿಷ್ಯೇ, ಇಮೇ ಗಂಧಾಃ, ಸುಗಂಧಾಃ, ಪುಷ್ಪಾಣಿ, ಸುಪುಷ್ಪಾಣಿ ಗಂಧ, ಧೂಪ, ದೀಪ ಸಕಲಾರಾಧನೈ ಸ್ವರ್ಚಿತಂ | ವಿಷ್ಣೋ ಉಪಾಯನದಾನಂ ರಕ್ಷಸ್ವ.

ಇದಂ ಉಪಯನರ್ದಾನಂ ಶ್ರೀ ಸತ್ಯನಾರಾಯಣಸ್ವಾಮಿ
ಪ್ರೀತಿಂಕಾಮೇತಿ ತುಭ್ಯಂ ಸಂಪ್ರದೇ ನಮಮ ನಮಮ |
ಸತ್ಯಶ ಪ್ರತಿಗೃಹ್ಣಾತು ಸತ್ಯೇಶೋ ವೈ ದದಾತಿ ಚ |
ಸತ್ಯೇಶಃ ತಾರಕೋಭ್ಯಾಂ ಸತ್ಯೇಶಾಯ ನಮೋ ನಮಃ ||

ಪುನಃ ಪೂಜಾಃ

ಆರಾಧಿತಾನಾಂ ದೇವಾನಾಂ ಪುನಃ ಪೂಜಾಂಕರಿಷ್ಯೇ ಶ್ರೀ ಸತ್ಯನಾರಾಯಣಸ್ವಾಮಿ ದೇವತಾಭ್ಯೋ ನಮಃ ಪೂಜಾಂತೇ ಛತ್ರಂ ಧಾರಯಾಮಿ | ಚಾಮರಂ-ವೀಜಯಾಮಿ | ನೃತ್ಯಂ ದರ್ಶಯಾಮಿ | ನಾಟ್ಯಂ ದರ್ಶಯಾಮಿ | ಗೀತಂ ಶ್ರಾವಯಾಮಿ | ವಾದ್ಯಂ ಸಮರ್ಪಯಾಮಿ | ಆಂದೋಳಿಕಾರೋಹಣಂ ಸಮರ್ಪಯಾಮಿ | ಅಶ್ವಾರೋಹಣಂ ಸಮರ್ಪಯಾಮಿ | ಗಜಾರೋಹಣಂ ಸಮರ್ಪಯಾಮಿ | ಧ್ವಜಾರೋಹಣಂ ಸಮರ್ಪಯಾಮಿ | ಪುರಾಣಶ್ರವಣಂ ಶ್ರಾವಯಾಮಿ| ಪಂಚಾಂಗ ಶ್ರವಣಂ ಸಮರ್ಪಯಾಮಿ, ಸಮಸ್ತ ರಾಜೋಪಚಾರ, ದೇವೋಪಚಾರ, ಭಕ್ತ್ಯೋಪಚಾರ, ಶಕ್ತ್ಯೋಪಚಾರ, ಮಾನಸೋಪಚಾರ, ವ್ರತೋಪಚಾರ, ವೇದೋಪಚಾರ ಪೂಜಾಂ ಸಮರ್ಪಯಾಮಿ.

ಭಗವತ್ ಅರ್ಪಣ (ಆತ್ಮ ಸಮರ್ಪಣ)

ಯಸ್ಯಸ್ಮೃತ್ಯಾಚ ನಾಮೋಕ್ತ್ಯಾ ತಪಃಪೂಜಾ ಕ್ರಿಯಾದಿಷು |
ನ್ಯೂನಂ ಸಂಪೂರ್ಣತಾಂ ಯಾತಿ ಸದ್ಯೋ ವಂದೇ ತಮಚ್ಯುತಂ |
ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಜನಾರ್ದನ |
ಯತ್ಪೂಜಿತಂ ಮಯಾದೇವ ಪರಿಪೂರ್ಣಂ ತದಸ್ತು ಮೇ

ಅನಯಾ ಪೂಜಾವಿಧಾನೇನ ಭಗವಾನ್ ಸರ್ವಾತ್ಮಕ ಶ್ರೀ ಸತ್ಯನಾರಾಯಣ ಸುಪ್ರೀತೋ ಸುಪ್ರಸನ್ನೋ ವರದೋ ಭವಂತು | ಪೂಜಾಕಾಲೇ ಮಧ್ಯೇ ಮಂತ್ರ ತಂತ್ರ ಸ್ವರ ವರ್ಣ ಪದ ಒತ್ತಕ್ಷರ ಧ್ಯಾನ ನ್ಯೂನಾತಿರಿಕ್ತ ಲೋಪ ದೋಷ ಪ್ರಾಯಶ್ಚಿತ್ತಾರ್ಥಂ ನಾಮತ್ರಯ ಮಂತ್ರಜಪಂ ಕರಿಷ್ಯೇ.

Sri Vidyabharathi Book Centre, Sringeri

CC-0. In Public Domain. Digitized by eGangotri

ಅಚ್ಯುತಾಯ ನಮಃ, ಅನಂತಾಯನಮಃ ಗೋವಿಂದಾಯ ನಮಃ
ಅಚ್ಯುತಾಯ ನಮಃ ಅನಂತಾಯ ನಮಃ ಗೋವಿಂದಾಯ ನಮಃ
ಅಚ್ಯುತಾಯ ನಮಃ ಅನಂತಾಯ ನಮಃ ಗೋವಿಂದಾಯ ನಮಃ
ಅಚ್ಯುತ ಅನಂತ ಗೋವಿಂದೇಭ್ಯೋ ನಮಃ ||
ಕಾಯೇನ ವಾಚಾ ಮನಸೇಂದ್ರಿಯೈರ್ವಾ ಬುದ್ಧ್ಯಾತ್ಮನಾ ವಾ ಪ್ರಕೃತೇ ಸ್ವಭಾವಾತ್ |
ಕರೋಮಿಯದ್ಯತ್ಸಕಲಂ ಪರಸ್ಮೈನಾರಾಯಣ ಇತಿ ಸಮರ್ಪಯಾಮಿ.

ಕ್ಷಮಾಪಣಂ

ಅಪರಾಧ ಸಹಸ್ರಾಣಿ ಕ್ರಿಯಂತೇಹರ್ನಿಷಂ ಮಯಾ |
ತಾನಿ ಸರ್ವಾಣಿ ಮೇ ದೇವಾ ಕ್ಷಮಸ್ವ ಪುರುಷೋತ್ತಮ ||
ಇತಿ ಕ್ಷಮಾಪಣಂ ಸಂಪ್ರಾರ್ಥ್ಯ ಪೂಜಾಂ ಸಮಾಪಯೇತ್ ||
ಯಾಃ ಫಲನೀರ್ಯಾ ಅಫಲಾ ಅಪುಷ್ಪಾಯಾಶ್ಚ ಪುಷ್ಪಿಣೀಃ
ಬೃಹಸ್ಪತೀ ಪ್ರಸೂತಾಸ್ತಾನೋ ಮುಂಚತ್ವಗ್ಂ ಹಸಃ
(ಪ್ರಸಾದದ ಹೂವು ತೆಗೆದುಕೊಳ್ಳುವುದು)
ಅಕಾಲಮೃತ್ಯುಹರಣಂ ಸರ್ವವ್ಯಾಧಿ ನಿವಾರಣಂ |
ಸಮಸ್ತದುರಿತೋಪಶಮನಂ ಶ್ರೀ ಸತ್ಯನಾರಾಯಣ ಪಾದೋದಕಂ
ಪಾವನಂ ಶುಭಂ **(ತೀರ್ಥವನ್ನು ಸೇವಿಸುವುದು)**
ಸತ್ಯನಾರಾಯಣ ಪಾದಾರ್ಪಿತಂ ತತ್‌ಪುಷ್ಪಂ ಶಿರಸಿ ಧಾರಯೇತ್
ಕೋಟಿಜನ್ಮಕೃತ ಪುಣ್ಯಂ ತತ್‌ಕ್ಷಣೇನ ಲಭ್ಯತೇ ಕೋಟಿಜನ್ಮಕೃತಂ ಪಾಪಂ
ಧಾರಯೇನ ವಿನಶ್ಯತೇ ||

||ಶ್ರೀಕೃಷ್ಣಾರ್ಪಣಮಸ್ತು||

ಉದ್ವಾಸನಂ

(ಕುಸುಮಾಕ್ಷತಾನ್ ಗೃಹೀತ್ವಾ) ಯಾಂತು ದೇವಗಣಾಸ್ಸರ್ವೇ ಪೂಜಾ-
ಮಾದಾಯಮತ್ಕೃತಾಂ | ಇಷ್ಟಕಾಮ್ಯಾರ್ಥ ಸಿದ್ಧ್ಯರ್ಥಂ ಪುನರಾಗಮನಾಯಚ |
ಶ್ರೀ ಸತ್ಯನಾರಾಯಣಸ್ವಾಮಿನೇ ನಮಃ ಯಥಾಸ್ಥಾನ ಮುದ್ವಾಸಯಾಮಿ ||
(ಈ ಮಂತ್ರವನ್ನು ಪಠಿಸಿ ಸ್ವಾಮಿಯನ್ನು ಸ್ವಲ್ಪ ಬಲಗಡೆಗೆ ಸರಿಸುವುದು)

||ಶ್ರೀ ಸತ್ಯನಾರಾಯಣವ್ರತ ಪೂಜಾವಿಧಿ ಸಮಾಪ್ತ||

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ಕಾಂದಪುರಾಣದ ರೇವಾಖಂಡದ

ಶ್ರೀ ಸತ್ಯನಾರಾಯಣ ವ್ರತ ಕಥೆ

ಮೊದಲನೆಯ ಅಧ್ಯಾಯ

ನೈಮಿಶಾರಣ್ಯ ವಾಸಿಗಳಾದ ಸಮಸ್ತ ಋಷಿಗಳು ಒಂದು ಕಾಲದಲ್ಲಿ ಪೌರಾಣಿಕೋತ್ತಮರಾದ ಸೂತಮಹರ್ಷಿಯನ್ನು ಕುರಿತು ಎಲೈ ಮುನಿವರ್ಯನೇ ! ಯಾವ ವ್ರತಾಚರಣೆಯಿಂದ ಅಥವಾ ಯಾವ ತಪಸ್ಸಿನಿಂದ ಅಭೀಷ್ಟವನ್ನು ಹೊಂದಬಹುದು? ಆ ಸಮಸ್ತವನ್ನೂ ಕೃಪೆಯಿಂದ ಹೇಳಬೇಕೆಂದು ಪ್ರಾರ್ಥಿಸಿದರು. ಸೂತರು ಶೌನಕಾದಿಗಳನ್ನು ಕುರಿತು, "ಎಲೈ ಮುನಿಗಳಿರಾ ! ಆಲಿಸಿರಿ. ಭಗವಂತನಾದ ಶ್ರೀಮನ್ನಾರಾಯಣನು ಪೂರ್ವದಲ್ಲಿ ದೇವರ್ಷಿಯಾದ ನಾರದರಿಗೋಸ್ಕರ ಯಾವುದನ್ನು ಹೇಳಿದನೋ ಆ ಸಮಸ್ತವನ್ನೂ ಹಾಗೆಯೇ ನುಡಿಯುವೆನು. ಸಾವಧಾನ ಚಿತ್ತರಾಗಿ ಕೇಳಿರಿ. ಲೋಕಾನುಗ್ರಹ ಮಾಡಬೇಕೆಂಬ ಬಯಕೆಯಿಂದ ನಾರದರು ಸಮಸ್ತ ಲೋಕಗಳನ್ನು ಸುತ್ತುತ್ತಾ ಭೂಲೋಕಕ್ಕೆ ಬಂದರು. ಅನಂತರ ಅಲ್ಲಿ ನಾನಾ ವಿಧವಾದ ಕಷ್ಟಗಳಿಂದ ಕೂಡಿದಂಥಾ, ಅನೇಕ ಯೋನಿಗಳಲ್ಲಿ ಉದ್ಭವಿಸಿದಂಥಾ, ತಮ್ಮ ಪೂರ್ವಾರ್ಜಿತ ಕರ್ಮಫಲಗಳಿಂದ ಕಷ್ಟಪಡುತ್ತಿರುವವರನ್ನು ನೋಡಿ ಈ ಲೋಕದ ಸಂಕಟಗಳ ಪರಿಹಾರ ಯಾವ ಉಪಾಯದಿಂದ ಸಾಧ್ಯವಾಗಬಹುದೆಂದು ಮನಸ್ಸಿನಲ್ಲಿ ಯೋಚಿಸಿ ವೈಕುಂಠವನ್ನು ತಲುಪಿದರು. ಅಲ್ಲಿ ಶುಭ್ರವರ್ಣವುಳ್ಳವನಾಗಿಯೂ, ನಾಲ್ಕು ತೋಳುಗಳುಳ್ಳವನಾಗಿಯೂ ಇರುವ ಕಮಲಾಪತಿಯನ್ನು ಕಂಡು 'ಎಲೈ ಅನಂತವಾದ ಪರಾಕ್ರಮವುಳ್ಳಂಥಾ, ವಾಕ್‌ಮನಸ್ಸುಗಳಿಗೆ ಅಗೋಚರವಾದ ಆಕಾರವುಳ್ಳಂಥಾ, ಆದಿಯೂ ಮಧ್ಯವೂ ಕೊನೆಯೂ ಇಲ್ಲದಂಥಾ, ಗುಣ ಸ್ವರೂಪನಾದಂಥಾ, ಸಕಲ ಭೂತಗಳಿಗೂ ಮೊದಲನೆಯವನಾದಂಥಾ, ಭಕ್ತರ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಕಟವನ್ನು ಹೋಗಲಾಡಿಸತಕ್ಕಂಥಾ ಸ್ವಾಮಿಯೇ । ನಿನಗೆ ನಮಸ್ಕಾರವೆನ್ನಲು, ಆಗ ನಾರಾಯಣನು 'ಎಲೈ ನಾರದ ಮಹರ್ಷಿಯೇ, ನಿನ್ನ ಮನಸ್ಸಿನಲ್ಲಿ ಏನಿರುವುದು? ಅದನ್ನು ಹೇಳಿದೆಯಾದರೆ ನಿನಗೆ ತಕ್ಕ ಸಮಾಧಾನವನ್ನು ಹೇಳುವೆನೆನ್ನಲು, ಆಗ ನಾರದರು 'ಎಲೈ ಭಕ್ತವತ್ಸಲನೇ, ಭೂಲೋಕದಲ್ಲಿ ಹುಟ್ಟಿದಂಥಾ ಸಕಲ ಮಾನವರೂ ತಮ್ಮ ತಮ್ಮ ಪಾಪಕರ್ಮಗಳಿಂದ ದಹಿಸಲ್ಪಡುತ್ತಿರುವರು. ಸುಲಭದಲ್ಲಿ ಅವರ ಸಂಕಟ ಹೇಗೆ ಪರಿಹಾರ ವಾಗುವುದೋ ಅದನ್ನು ನನ್ನಲ್ಲಿ ನೀನು ದಯೆತೋರಿ ತಿಳಿಸೆನ್ನಲು,

ಆಗ ಭಗವಂತನು 'ನಾರದ ! ಪ್ರಪಂಚಾನುಗ್ರಹಾಕಾಂಕ್ಷೆಯುಳ್ಳ ನೀನು ಚೆನ್ನಾಗಿ ಕೇಳಿದೆ. ಯಾವ ಕರ್ಮಮಾಡಿದರೆ ಮನುಷ್ಯನು ಅಜ್ಞಾನದಿಂದ ಬಿಡಲ್ಪಟ್ಟು, ವಿಮುಕ್ತನಾಗುವನೋ ಆ ರಹಸ್ಯವನ್ನು ಹೇಳುವೆನು ಕೇಳು. ಸ್ವರ್ಗ, ಮರ್ತ್ಯಲೋಕಗಳಲ್ಲಿ ದುರ್ಲಭವಾದ ಅತಿ ಪುಣ್ಯಕರವಾದ ಒಂದು ವ್ರತವುಂಟು. ಎಲೈ ಮಗುವೇ! ನನಗೆ ನಿನ್ನಲ್ಲಿರುವ ವಾತ್ಸಲ್ಯದಿಂದ ಈಗ ಅದನ್ನು ತಿಳಿಸುವೆನು. ವಿಧ್ಯುಕ್ತವಾಗಿ ಸ್ವಲ್ಪವೂ ಲೋಪವಿಲ್ಲದಂತೆ ಸತ್ಯನಾರಾಯಣ ವ್ರತವನ್ನು ಮಾಡಿದಲ್ಲಿ ಇಹಲೋಕದಲ್ಲಿ ಸಮಸ್ತ ಸುಖವನ್ನು ಅನುಭವಿಸಿ ಪರಲೋಕದಲ್ಲಿ ಮುಕ್ತಿಯನ್ನು ಹೊಂದುವರು' ಎಂಬುದಾಗಿ ನುಡಿದ ಭಗವದ್ವಾಕ್ಯವನ್ನಾಲಿಸಿ ನಾರದ ಮಹರ್ಷಿಯು, 'ಎಲೈ ಜಗದೊಡೆಯನೇ! ಈ ಸತ್ಯನಾರಾಯಣ ವ್ರತವನ್ನು ಮಾಡಲು ಫಲವೇನು? ಮತ್ತು ಇದರ ವಿಧಾನವೆಂತು? ಯಾರಿಂದ ಪೂರ್ವದಲ್ಲಿ ಈ ವ್ರತವು ಆಚರಿಸಲ್ಪಟ್ಟಿತು? ಈ ವ್ರತಾಚರಣೆಗೆ ಕಾಲ ಯಾವುದು? ಇವೆಲ್ಲವನ್ನೂ ವಿಸ್ತಾರವಾಗಿ ಹೇಳಬೇಕೆಂದು ಕೇಳಿದ ನಾರದರಿಗೆ ಭಗವಂತನು ಹೇಳುವನು.

'ಈ ವ್ರತವು ದುಃಖ ಶೋಕಾದಿಗಳನ್ನು ಪರಿಹರಿಸುವುದು. ಧನಧಾನ್ಯಗಳನ್ನು ಸಮೃದ್ಧಿಪಡಿಸುವುದು. ಸಕಲ ಸೌಭಾಗ್ಯ ಸಂತಾನಗಳನ್ನುಂಟುಮಾಡುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಎಲ್ಲಾ ಕಡೆಯಲ್ಲೂ ಜಯವನ್ನುಂಟುಮಾಡುವುದು. ಯಾವ ದಿನಗಳಲ್ಲಿ ಮನುಷ್ಯನಿಗೆ ಈ ವ್ರತವನ್ನು ಮಾಡಬೇಕೆಂದು ಅಪೇಕ್ಷೆ ಉಂಟಾಗುವುದೋ ಆ ದಿವಸ ಭಕ್ತಿಶ್ರದ್ಧೆಗಳಿಂದ ಕೂಡಿ ಸಾಯಂಕಾಲದಲ್ಲಿ ಶ್ರೀಸತ್ಯನಾರಾಯಣ ಸ್ವಾಮಿಯನ್ನರ್ಚಿಸಬೇಕು. ಧರ್ಮದಲ್ಲೇ ದೃಷ್ಟಿಯುಳ್ಳವನಾಗಿ, ವಿಪ್ರ-ರಿಂದೊಡಗೂಡಿ ಶ್ರೇಷ್ಠವಾದ ಹಾಗಪಾಲು ಭಕ್ಷ್ಯಗಳನ್ನೂ, ಬಾಳೆಹಣ್ಣು, ತುಪ್ಪ, ಹಾಲು, ರವೆ, ತಂಬಿಟ್ಟು, ಶಕ್ತಿಯಿಲ್ಲದಿದ್ದರೆ ಬೆಲ್ಲ, ಸಕ್ಕರೆಗಳಿಂದ ಮಿಶ್ರವಾದ ಅಕ್ಕಿ ಹಿಟ್ಟಿನ ತಂಬಿಟ್ಟು ಇವುಗಳೆಲ್ಲವೂ (ಕಾಲುಭಾಗ) ಹಾಗಪಾಲು ಸೇರಿಸಿ ನೈವೇದ್ಯವನ್ನು ಮಾಡಬೇಕು. ಆ ಬಳಿಕ ಫಲದಕ್ಷಿಣೆಗಳನ್ನು ಬ್ರಾಹ್ಮಣರಿಗರ್ಪಿಸಿ ಕಥೆಯನ್ನು ಕೇಳಬೇಕು. ಅನಂತರ ಬಂಧುಗಳಿಗೂ ಇಷ್ಟಮಿತ್ರರಿಗೂ ಭೋಜನವನ್ನು ಮಾಡಿಸಿ ತಾನು ಭೋಜನವನ್ನು ಮಾಡಬೇಕು. ಈ ರೀತಿಯಲ್ಲಿ ಈ ವ್ರತವನ್ನು ದೇವಾಲಯ, ನದೀತೀರ ಮೊದಲಾದ ಪ್ರದೇಶಗಳಲ್ಲಿ ಮಾಡಿದ ಬಳಿಕ ನೃತ್ಯಗೀತಾದಿಗಳಿಂದ ಸ್ವಾಮಿಯನ್ನು ಧ್ಯಾನಿಸಿ ಸ್ವಗೃಹವನ್ನು ಕುರಿತು ಬರಬೇಕು. ಈ ಪ್ರಕಾರ ನಾಲ್ಕು ವರ್ಷಗಳು ಈ ವ್ರತವನ್ನಾಚರಿಸಿ ಆದಿ ಯಲ್ಲಾಗಲೀ, ಮಧ್ಯದಲ್ಲಾಗಲೀ, ಕೊನೆಯಲ್ಲಾಗಲೀ ಉದ್ಯಾಪನೆಯನ್ನು ಮಾಡಿದರೆ ಪೂರ್ಣಫಲ ಪ್ರಾಪ್ತಿಯಾಗುವುದು. ಈ ಮೇರೆಗೆ ಮಾಡಲು ಖಂಡಿತವಾಗಿ ಮನುಷ್ಯರಿಗೆ ಅಭೀಷ್ಟ ಸಿದ್ಧಿಯುಂಟಾಗುವುದು. ಈ ಕಲಿಯುಗದಲ್ಲಿ ಇದಕ್ಕಿಂತಲೂ ಸುಖಕರವಾದ ಸುಲಭೋಪಾಯವು ಇಲ್ಲವೆಂದು' ಶ್ರೀಮನ್ನಾರಾಯಣನು ನಾರದರಿಗೆ ಹೇಳಿದನೆಂದು ಶೌನಕಾದಿಗಳಿಗೆ ಸೂತ ಮಹರ್ಷಿಯು ಹೇಳದರೆಂಬಲ್ಲಿಗೆ ಮೊದಲನೇ ಅಧ್ಯಾಯ ಮುಗಿದುದು.

*(ದೇವರಿಗೆ ಹಣ್ಣು,ಕಾಯಿ ಇತ್ಯಾದಿ ನೈವೇದ್ಯ ಸಮರ್ಪಿಸಿ ಆರತಿ ಬೆಳಗಬೇಕು).

Sri Vidyabharathi Book Centre, Sringeri

CC-O. In Public Domain. Digitized by eGangotri

ನೀರಾಜನ ಮಂತ್ರ :

ಓಂ ಸಾಮ್ರಾಜ್ಯಂ ಭೋಜ್ಯಂ ಸ್ವಾರಾಜ್ಯಂ ವೈರಾಜ್ಯಂ | ಪಾರಮೇಷ್ಠ್ಯಂ ರಾಜ್ಯಂ ಮಹಾರಾಜ್ಯಮಾಧಿಪತ್ಯಂ | ಅಯಂ ಸಮಂತ ಪರ್ಯಾಯೀ ಸ್ಯಾತ್ ಸಾರ್ವಭೌಮಸ್ಸಾರ್ವಾಯುಷ | ಆಂತಾದಾ ಪರಾರ್ಧಾತ್ ಪೃಥಿವ್ಯೈ ಸಮುದ್ರಪರ್ಯಂತಾಯಾ | ಏಕರಾದಿತಿ || ಶ್ರೀ ಸತ್ಯನಾರಾಯಣಸ್ವಾಮಿ ದೇವತಾಭ್ಯೋ ನಮಃ -ನೀರಾಜನಂ ಸಮರ್ಪಯಾಮಿ ||ಶ್ರೀಃ||

ಅನೇನ ಪ್ರಥಮಾಧ್ಯಾಯ ಕಥಾ ಶ್ರವಣೇನ ಶ್ರೀ ಸತ್ಯನಾರಾಯಣಸ್ವಾಮಿ ಪ್ರೀಯತಾಂ ||

******

-: ನಮ್ಮ ಜನಪ್ರಿಯ ಪ್ರಕಟಣೆ :-

ಪ್ರತಿ ಮನೆಯಲ್ಲೂ ಇರಬೇಕಾದ ಪೂಜಾಗ್ರಂಥ

ಸಟೀಕಾ ವ್ರತರತ್ನಂ

ಲೇಖಕರು :

ಶ್ರೀ ಲಕ್ಷ್ಮೀನರಸಿಂಹ ಶಾಸ್ತ್ರಿಗಳು

40 ವ್ರತಗಳು ಹಾಗೂ 8 ಸಹಸ್ರನಾಮಾವಳಿಗಳು

716 ಪುಟಗಳ ಬೃಹತ್ ಗ್ರಂಥ

Sri Vidyabharathi Book Centre, Sringeri

CC-O. In Public Domain. Digitized by eGangotri

ಎರಡನೆಯ ಅಧ್ಯಾಯ

ಸೂತಮುನಿಗಳು ಮುಂದುವರೆಸುವರು -

ನಂತರ ವಿಷ್ಣುವು ನಾರದರನ್ನು ಕುರಿತು ಎಲೈ ನಾರದ ಮಹರ್ಷಿಯೇ ! ಪೂರ್ವದಲ್ಲಿ ನೀನು ಕೇಳಿದಂತೆ ಈ ವ್ರತವು ಯಾರಿಂದ ಆಚರಿಸಲ್ಪಟ್ಟಿತೋ ಆ ವಿಷಯವನ್ನು ಕುರಿತು ಪುರಾತನವಾದ ಒಂದು ಇತಿಹಾಸ ಹೇಳುವೆನು. ಕಾಶೀಕ್ಷೇತ್ರದಲ್ಲಿ ಅತ್ಯಂತ ದರಿದ್ರನಾದ ಒಬ್ಬ ಬ್ರಾಹ್ಮಣನಿದ್ದನು. ಆತನು ಪ್ರತಿದಿನದಲ್ಲಿಯೂ ಹಸಿವು ಬಾಯಾರಿಕೆಗಳಿಂದ ಬಾಧಿತನಾಗಿ ಸುತ್ತುತ್ತಲಿದ್ದನು. ದೀನರಲ್ಲಿ ಅತ್ಯಂತ ದಯೆಯುಳ್ಳ ವಿಷ್ಣುವು ಬ್ರಾಹ್ಮಣನ ರೂಪದಲ್ಲಿ ಬಂದು ಆ ದೀನನನ್ನು ದಯೆಯಿಂದ ಕೇಳಿದನು.

ಎಲೈ ಬ್ರಾಹ್ಮಣನೇ ! ಪ್ರತಿದಿನದಲ್ಲೂ ದುಃಖಿತನಾಗಿ ಏತಕೋಸ್ಕರ ಸುತ್ತುತ್ತಿರುವೆ ? ಎಂದು ಕೇಳಲು, ಈ ಭೂಸುರನಿಂತೆಂದನು ; ಎಲೈ ಪ್ರಭುವೇ, ನಾನು ಅತಿ ದರಿದ್ರನು. ಭಿಕ್ಷಾರ್ಥವಾಗಿ ತಿರುಗುತ್ತಲಿರುವೆನು. ನಿನಗೇನಾದರೂ ಈ ದಾರಿದ್ರ್ಯಹರಣೋಪಾಯ ತಿಳಿದಿದ್ದರೆ ಕೃಪೆಯಿಂದ ಹೇಳು ಎನ್ನಲು, ವೃದ್ಧ ಬ್ರಾಹ್ಮಣನು ಹೇಳುವನು ; ಎಲೈ ಬ್ರಾಹ್ಮಣನೇ ! ಸತ್ಯನಾರಾಯಣನೆಂದು ಕರೆಯಲ್ಪಡುವ ವಿಷ್ಣುವು ಕೋರಿದ ಇಷ್ಟಾರ್ಥಗಳನ್ನು ಕೊಡುವನು. ನೀನು ಆ ವ್ರತವನ್ನು ಮಾಡಿ ಸತ್ಯನಾರಾಯಣನನ್ನು ಪೂಜಿಸು. ಯಾವ ವ್ರತ ಮಾಡಿ ಮಾನವನು ಸರ್ವದುಃಖಗಳಿಂದಲೂ ಮುಕ್ತನಾಗುವನೋ ಅಂಥಾ ಉತ್ತಮವಾದ ವ್ರತವನ್ನೂ, ತದ್ವಿಧಾನವನ್ನೂ ಬ್ರಾಹ್ಮಣನಿಗೆ ಹೇಳಿ ವೃದ್ಧ ಬ್ರಾಹ್ಮಣ ರೂಪಿಯಾದ ಸತ್ಯನಾರಾಯಣಸ್ವಾಮಿಯು ಅಂತರ್ಧಾನನಾದನು. ನಂತರ ಬ್ರಾಹ್ಮಣನು ವ್ರತವನ್ನು ಮಾಡಬೇಕೆಂದು ಚಿಂತಿಸುತ್ತಾ ರಾತ್ರಿ ನಿದ್ರೆಯನ್ನು ಕೂಡ ಮಾಡಲಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾರನೇ ದಿವಸ ಬೆಳಿಗ್ಗೆ ಎದ್ದು ಸತ್ಯನಾರಾಯಣ ವ್ರತವನ್ನು ಮಾಡುವುದಾಗಿ ಸಂಕಲ್ಪ ಮಾಡಿ ಭಿಕ್ಷೆಗೆ ಹೋದನು. ಆ ದಿನದಲ್ಲಿ ಬ್ರಾಹ್ಮಣನು ವಿಶೇಷವಾದ ಹಣವನ್ನು ಹೊಂದಿದನು. ಆ ಹಣದಿಂದ ಬಂಧುಗಳೊಂದಿಗೆ ಶ್ರೀ ಸತ್ಯನಾರಾಯಣ ವ್ರತನವನ್ನು ಆಚರಿಸಿದನು. ಆ ದರಿದ್ರ ಬ್ರಾಹ್ಮಣನು ವ್ರತಪ್ರಭಾವದಿಂದ ಸಮಸ್ತ ಸಂಪತ್ತುಳ್ಳವನಾಗಿ, ದುಃಖರಹಿತನಾಗಿ ಅಂದಿನಿಂದ ಪ್ರತಿ ತಿಂಗಳೂ ವ್ರತವನ್ನು ತಪ್ಪದೆ ಶ್ರದ್ಧೆಯಿಂದ ಮಾಡುತ್ತಿದ್ದನು. ಈ ಪ್ರಕಾರ ಬ್ರಾಹ್ಮಣೋತ್ತಮನು ಸತ್ಯನಾರಾಯಣಸ್ವಾಮಿಯ ವ್ರತವನ್ನು ಮಾಡುವವನಾಗಿ ಸಕಲ ವಿಧವಾದ ಪಾಪಗಳಿಂದ ಬಿಡಲ್ಪಟ್ಟು, ಇತರರಿಂದ ಹೊಂದಲು ಅಸಾಧ್ಯವಾದ ಮುಕ್ತಿಯನ್ನು ಹೊಂದಿದನು. ಎಲೈ ನಾರದ ಮಹರ್ಷಿಯೇ ! ಈ ವ್ರತದ ಆಚರಣೆಯಿಂದ ಸಕಲ ದುಃಖಗಳೂ ನಾಶವಾಗುತ್ತವೆ ಎಂಬುದಾಗಿ ಶ್ರೀ ಮನ್ನಾರಾಯಣನು ನುಡಿದನು. ಎಲೈ ಋಷಿಗಳಿರಾ ! ಈ ರೀತಿಯಾಗಿ ಶ್ರೀ ವಿಷ್ಣುವು ಮಹಾತ್ಮನಾದ ನಾರದರಿಗೋಸ್ಕರ ಹೇಳಿದ ವಿಷಯವು ನಿಮಗೆ ನನ್ನಿಂದ ಹೇಳಲ್ಪಟ್ಟಿತು. ಮತ್ತೇನನ್ನು ಹೇಳಲಿ ಎಂಬುದಾಗಿ ಶೌನಕಾದಿಗಳನ್ನು ಕುರಿತು ಸೂತ ಮಹರ್ಷಿಯು ನುಡಿಯಲಾಗಿ, ಋಷಿಗಳು ನುಡಿಯುವರು -

ಎಲೈ ಮಹರ್ಷಿಯೇ! ಈ ವ್ರತವನ್ನು ಆ ಬ್ರಾಹ್ಮಣನಿಂದ ಕೇಳಿ ಭೂಮಿಯಲ್ಲಿ ಮತ್ತ್ಯಾರಿಂದ ಆಚರಿಸಲ್ಪಟ್ಟಿತು? ಆ ಸಮಸ್ತವನ್ನು ತಿಳಿಸ ಬೇಕೆನ್ನಲು, ಸೂತರು ಹೇಳುವರು; ಎಲೈ ಮುನಿವರ್ಯರೇ! ಭೂಮಿಯಲ್ಲಿ ಈ ವ್ರತವು ಯಾರಿಂದ ಪೂರ್ವದಲ್ಲಿ ಆಚರಿಸಲ್ಪಟ್ಟಿತೋ ಆ ಸಂಗತಿ ಕೇಳಿರಿ. ಒಂದು ಸಮಯದಲ್ಲಿ ಪೂರ್ವೋಕ್ತವಾದ ಆ ಬ್ರಾಹ್ಮಣನು ವಿಶೇಷವಾಗಿ ಪೂಜೋಪಕರಣಗಳಿಂದ, ನೆಂಟರಿಷ್ಟರಿಂದಲೂ ಕೂಡಿದವನಾಗಿ ವ್ರತವನ್ನು ಆಚರಿಸುತ್ತಿದ್ದನು. ಆ ವೇಳೆಯಲ್ಲಿಯೇ ಕಟ್ಟಿಗೆ ಮಾರುವವನೊಬ್ಬನು ಮನೆಯ ಹೊರಗಡೆಯೇ ಹೊರೆಯನ್ನು ಇಳಿಸಿ ಬ್ರಾಹ್ಮಣನ ಮನೆಯನ್ನು ಪ್ರವೇಶಿಸಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri
ಬಹಳ ದಾಹದಿಂದ ಪೀಡಿತನಾಗಿದ್ದರೂ ಕೂಡ ಬ್ರಾಹ್ಮಣನಿಂದ ಮಾಡಲ್ಪಡುತ್ತಿದ್ದ ವ್ರತವನ್ನು ನೋಡಿ ಏನೋ ಒಂದು ವಿಧವಾದ ಭಕ್ತಿಯುಂಟಾಗಲು, ಸಾಷ್ಟಾಂಗವೆರಗಿ ಬ್ರಾಹ್ಮಣನನ್ನು ಕುರಿತು ಎಲೈ ಸ್ವಾಮಿಯೇ ! ನಿಮ್ಮಿಂದ ಆಚರಿಸಲ್ಪಡುತ್ತಿರುವ ಈ ಪೂಜೆ ಯಾವುದು ? ಇದನ್ನಾಚರಿಸಿದರೆ ಎಂಥಾ ಫಲ ಹೊಂದಬಹುದೆಂದು ಕಟ್ಟಿಗೆ ಮಾರುವವನು ಕೇಳಲು, ಬ್ರಾಹ್ಮಣನು ಹೇಳುತ್ತಾನೆ.

ಇದು ಸತ್ಯನಾರಾಯಣಸ್ವಾಮಿಯ ವ್ರತವು. ಕೋರಿದ ಇಷ್ಟಾರ್ಥಗಳನ್ನೆಲ್ಲಾ ಕೊಡುವಂಥಾದ್ದು. ನನಗೆ ಈ ವ್ರತಾನುಗ್ರಹದಿಂದಲೇ ಧನಧಾನ್ಯಾದಿಯಾಗಿ ಸಂಪತ್ತುಗಳು ಉಂಟಾಯಿತೆಂದು ಹೇಳಲು, ಕಟ್ಟಿಗೆ ಮಾರುವವನು ಅತ್ಯಂತ ಸಂತೋಷದಿಂದ ಆ ಸ್ವಾಮಿಯ ಪ್ರಸಾದ ಭಕ್ಷಿಸಿ, ಜಲಪಾನಮಾಡಿ, ಆ ದಿವಸ ಕಟ್ಟಿಗೆ ಮಾರಿದ ಹಣದಲ್ಲಿ ಶ್ರೀ ಸತ್ಯನಾರಾಯಣ ವ್ರತವನ್ನು ಮಾಡಬೇಕೆಂದು ಆ ಸ್ವಾಮಿಯನ್ನು ಧ್ಯಾನಿಸುತ್ತಾ ತಲೆಯ ಮೇಲೆ ಹೊರೆಯನ್ನಿಟ್ಟುಕೊಂಡು ಆ ಪಟ್ಟಣದಲ್ಲಿ ಪುಣ್ಯವಂತರಾದ ಧನಿಕರು ಎಲ್ಲಿರುವರೋ ಅಲ್ಲಿಗೆ ಹೋದನು. ಆ ದಿವಸ ಎಂದಿಗಿಂತಲೂ ದ್ವಿಗುಣವಾದ ಲಾಭವನ್ನು ಪಡೆದು, ಆ ಹಣದಿಂದ ಚೆನ್ನಾಗಿ ಪಕ್ವವಾಗಿರುವ ಬಾಳೆಹಣ್ಣು, ಸಕ್ಕರೆ, ಬೆಲ್ಲ, ಹಾಲು, ಮೊಸರು, ಗೋದಿಹಿಟ್ಟು ಇವೆಲ್ಲವನ್ನೂ ಕಾಲುಪಾಲು ಹೆಚ್ಚಾಗಿರುವಂತೆ ತೆಗೆದುಕೊಂಡು ತನ್ನ ಮನೆಯಲ್ಲಿ ಸೇರಿ ಬಂಧುಗಳೆಲ್ಲರನ್ನೂ ಕರೆಸಿ ಶಾಸ್ತ್ರೋಕ್ತವಾಗಿ ವ್ರತವನ್ನು ಮಾಡಲು, ವ್ರತದ ಪ್ರಭಾವದಿಂದ ಸಕಲ ಸಂಪತ್ತುಗಳನ್ನು ಪಡೆದು ಅಂತ್ಯದಲ್ಲಿ ಶ್ರೀ ಸತ್ಯನಾರಾಯಣಸ್ವಾಮಿಯ ಲೋಕವನ್ನು ಪಡೆದನು.

***(ದೇವರಿಗೆ ಹಣ್ಣು, ಕಾಯಿ ಇತ್ಯಾದಿ ನೈವೇದ್ಯ ಸಮರ್ಪಿಸಿ ಆರತಿ ಬೆಳಗಬೇಕು)**

Sri Vidyabharathi Book Centre, Sringeri

CC-O. In Public Domain. Digitized by eGangotri

ನೀರಾಜನಮಂತ್ರ :

ಸೋಮೋ ವಾ ಏತಸ್ಯ ರಾಜ್ಯಮಾಧತ್ತೇ |ಯೋ ರಾಜಾಸನ್ ರಾಜ್ಯೋವಾ ಸೋಮೇನ ಯಜತೇ | ದೇವಾಸುವಾ ಮೇತಾನಿ ಹವೀಗ್ಂಷಿ ಭವತಿ | ಏತಾವಂತೋ ವೈ ದೇವಾನಾಗ್ಂಸವಾಃ |ತ ಏವಾಸ್ಮೈಸವಾನ್ ಪ್ರಯಚ್ಛಂತಿ ತ ಏನಂ ಪುನಸ್ಸುವಂತೇ ರಾಜ್ಯಾಯ ದೇವಸೂರಾಜಾ ಭವತಿ ||

ಶ್ರೀ ಸತ್ಯನಾರಾಯಣಸ್ವಾಮಿ ದೇವತಾಭ್ಯೋ ನಮಃ ಮಂಗಳ ನೀರಾಜನಂ ಸಮರ್ಪಯಾಮಿ ||ಓಂ||

ಅನೇನ ದ್ವಿತಿಯಾಧ್ಯಾಯ ಕಥಾ ಶ್ರವಣೇನ ಶ್ರೀ ಸತ್ಯನಾರಾಯಣಸ್ವಾಮಿ ಪ್ರೀಯತಾಂ ||

******

ನಮ್ಮ ಜನಪ್ರಿಯ ಪ್ರಕಟಣೆ

ವಿದ್ಯಾರ್ಥಿನಿಯರು - ಅವಿವಾಹಿತ ಯುವತಿಯರು - ಉದ್ಯೋಗಸ್ಥ ಮಹಿಳೆಯರು - ವಿವಾಹಿತ ಮಹಿಳೆಯರಿಗಾಗಿ ಅಪೂರ್ವ ಸ್ತೋತ್ರ ಪುಸ್ತಕ

"ಶ್ರೀ ಗಾಯತ್ರೀ ಶಕ್ತಿಕವಚ"

- ಅರ್ಥಸಹಿತ -

- ಸಂಗ್ರಹ :ಶ್ರೀ ಗಂಡಸಿ ವಿಶ್ವೇಶ್ವರ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೂರನೆಯ ಅಧ್ಯಾಯ

ಸೂತ ಮುನಿಗಳು ಹೇಳುತ್ತಾರೆ - ಎಲೈ ಮುನಿಶ್ರೇಷ್ಠರೇ ! ಪುನಃ ಶ್ರೀ ಸತ್ಯನಾರಾಯಣ ವ್ರತಮಹಾತ್ಮ್ಯೆಯನ್ನು ಹೇಳುತ್ತೇನೆ ಕೇಳುವಂಥವರಾಗಿ ; ಪೂರ್ವದಲ್ಲಿ ಉಲ್ಕಮುಖನೆಂಬ ರಾಜನಿದ್ದನು. ಜಿತೇಂದ್ರಿಯನಾಗಿಯೂ, ಸತ್ಯವಾದಿಯಾಗಿಯೂ, ಒಳ್ಳೆಯ ಬುದ್ಧಿಶಾಲಿಯಾಗಿಯೂ ಇದ್ದ ಆತನು ಪ್ರತಿ ದಿವಸವೂ ದೇವಾಲಯಕ್ಕೆ ಹೋಗಿ ದೇವತಾರಾಧನೆ ಮಾಡಿ ಬ್ರಾಹ್ಮಣರಿಗೆ ದ್ರವ್ಯವನ್ನು ಕೊಟ್ಟು ಸಂತೋಷಪಡಿಸುತ್ತಿದ್ದನು. ಒಂದು ಸಮಯದಲ್ಲಿ ಆತನ ಪತ್ನಿ ಭದ್ರಶೀಲೆಯು ಪತಿಯುಕ್ತಳಾಗಿ ನದೀತೀರದಲ್ಲಿ ಸತ್ಯನಾರಾಯಣ ವ್ರತವನ್ನು ಮಾಡಿದಳು. ಆ ಸಮಯದಲ್ಲಿ ಅಲ್ಲಿಗೆ ಒಬ್ಬ ವರ್ತಕನು ವ್ಯಾಪಾರಕೋಸ್ಕರ ಬಹು ದ್ರವ್ಯಯುಕ್ತನಾಗಿ ಬಂದು, ನಾವೆಯನ್ನು ದಡದಲ್ಲಿ ಬಿಟ್ಟು ರಾಜದರ್ಶನಾರ್ಥಿಯಾಗಿ ಬಂದು, ವ್ರತವನ್ನು ಮಾಡುತ್ತಿರುವ ರಾಜನನ್ನು ಕಂಡು ವಿನಯದಿಂದ ಕೈ ಮುಗಿದು, ಎಲೈ ರಾಜನೇ ! ಭಕ್ತಿಯುಕ್ತನಾಗಿ ಮನಶ್ಶುದ್ಧಿಯಿಂದ ನೀನು ಮಾಡುತ್ತಲಿರುವುದೇನು ? ಆ ಸಮಸ್ತವನ್ನೂ ದಯೆಯಿಂದ ನನಗೆ ಹೇಳಬೇಕೆನ್ನಲು, ರಾಜನು ಎಲೈ ವ್ಯಾಪಾರಿಯೇ! ಬಂಧುಗಳಿಂದೊಡಗೂಡಿ ಪುತ್ರಾಸಕ್ತನಾದ ನಾನು ಸಕಲ ಇಷ್ಟಾರ್ಥಗಳನ್ನು ಕೊಡುವ ಶ್ರೀ ಸತ್ಯನಾರಾಯಣಸ್ವಾಮಿಯ ಪೂಜೆಯನ್ನು ಮಾಡುತ್ತಿರುವೆನೆನ್ನಲು, ಎಲೈ ರಾಜನೇ ! ನನಗೂ ಸಂತಾನವಿಲ್ಲದ ಕಾರಣ ಈ ವ್ರತಪ್ರಭಾವದಿಂದ ನಿಶ್ಚಯವಾಗಿ ಸಂತಾನವುಂಟಾಗುವುದೆಂದು ನಂಬಿದ್ದೇನೆಯಾಗಿ ಈ ವ್ರತ ವಿಧಾನವನ್ನು ತಿಳಿಸಬೇಕೆಂದು ಕೋರಿ, ರಾಜನಿಂದ ಆ ವಿಧಾನವನ್ನು ತಿಳಿದುಕೊಂಡು ವ್ಯಾಪಾರದಿಂದ ಹಿಂತಿರುಗಿ ಬಹು ಸಂತೋಷದಿಂದ ಮನೆಯನ್ನು ಸೇರಿ, ಸಂತಾನಪ್ರದವಾದ ಈ ವ್ರತ ಮಹಾತ್ಮ್ಯೆ ಎಲ್ಲವನ್ನೂ ಸತಿಗೆ ಹೇಳಿ, ನಮಗೆ ಸಂತಾನಪ್ರಾಪ್ತಿಯಾದರೆ ಆಗ್ಗೆ ಈ ವ್ರತವನ್ನು ತಪ್ಪದೆ ಮಾಡುವೆನೆಂದು ಹರಸಿಕೊಂಡನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗಿರಲು ಒಂದು ದಿನ ಋತುಸ್ನಾತಳಾಗಿ ಲೀಲಾವತಿಯು ಪತಿಯೊಡನೆ ಸಂತೋಷಗೊಂಡಿರಲು, ಶ್ರೀ ಸತ್ಯನಾರಾಯಣಸ್ವಾಮಿಯ ಪ್ರಭಾವದಿಂದ ಆ ದಿನದಿಂದಲೇ ಗರ್ಭವನ್ನು ಧರಿಸಿ ಹತ್ತನೇ ತಿಂಗಳಲ್ಲಿ ಪುತ್ರಿಕಾರತ್ನವನ್ನು ಪಡೆದಳು. ಶುಕ್ಲಪಕ್ಷದ ಚಂದ್ರನೋಪಾದಿಯಲ್ಲಿ ಆ ಕನ್ಯಾಮಣಿ ದಿನದಿನಕ್ಕೂ ವೃದ್ಧಿಯನ್ನು ಪಡೆಯುತ್ತಾ ಕಲಾವತಿ ಎಂದು ನಾಮಕರಣ ಮಾಡಲ್ಪಟ್ಟಳು. ಆಗ ಲೀಲಾವತಿ ತನ್ನ ಪತಿಯನ್ನು ಕುರಿತು -

ಎಲೈ ಸ್ವಾಮಿಯೇ, ಪೂರ್ವದಲ್ಲಿ ಸಂಕಲ್ಪಿಸಿದ ವ್ರತವನ್ನು ಇನ್ನೂ ಏತಕ್ಕಾಗಿ ಮಾಡಲಿಲ್ಲ ಎನ್ನಲಾಗಿ, ವರ್ತಕನು ಮಗಳ ವಿವಾಹ ಕಾಲದಲ್ಲಿ ಮಾಡುವೆನೆಂದು ಸತಿಯನ್ನು ಸಮಾಧಾನಪಡಿಸಿ ವ್ಯಾಪಾರಕ್ಕಾಗಿ ಹೊರಟು ಹೋದನು. ಕಲಾವತಿಯು ವಿವಾಹ ವಯಸ್ಕಳಾಗಲು, ಮಗಳನ್ನು ನೋಡಿ ತನ್ನ ಆಪ್ತರೊಡನೆ ಆಲೋಚಿಸಿ ಅವರ ಧರ್ಮಪದ್ಧತಿಯಂತೆ ಚಾರರನ್ನು ಕರೆದು ಜಾಗ್ರತೆಯಾಗಿ ಮಗಳ ವಿವಾಹಕ್ಕಾಗಿ ಅನುರೂಪನಾದ ವರನನ್ನು ಹುಡುಕಿ-ಕೊಂಡು ಬರುವಂತೆ ಕಳುಹಿಸಿದನು. ಈ ರೀತಿ ಆಜ್ಞಾಪಿಸಲ್ಪಟ್ಟ ಚಾರರು ಹೊರಟು ಕಾಂಚನವೆಂಬ ಪಟ್ಟಣದ ಒಬ್ಬ ವರ್ತಕನ ಕುಮಾರನನ್ನು ಕರೆತಂದರು. ಗುಣಾಢ್ಯನಾಗಿಯೂ, ಸುಂದರನಾಗಿಯೂ, ಬಾಲನಾಗಿಯೂ ಇರುವ ಆ ವರ್ತಕನ ಕುಮಾರನಾದ ವರನನ್ನು ನೋಡಿ ಆನಂದಚಿತ್ತನಾಗಿ ವರನಿಗೆ ತಮ್ಮ ಮಗಳನ್ನು ಧಾರೆ ಎರೆದುಕೊಟ್ಟರು.

ಧನಮದದಿಂದ ಕೂಡಿದ ವರ್ತಕನು ವಿವಾಹ ಕಾಲದಲ್ಲೂ ವ್ರತವನ್ನು ಆಚರಿಸಲಿಲ್ಲ. ಇದರಿಂದ ಸ್ವಾಮಿಗೆ ಅವನಲ್ಲಿ ಕ್ರೋಧವುಂಟಾಯಿತು. ಆ ಬಳಿಕ ವ್ಯಾಪಾರದಲ್ಲಿ ಬುದ್ಧಿಶಾಲಿಯಾದ ಆ ವರ್ತಕನು ಕಾಲವಶದಿಂದಲೂ, ಸ್ವಕರ್ಮ ವಶದಿಂದಲೂ ಪ್ರೇರೇಪಿಸಲ್ಪಟ್ಟು, ಅಳಿಯನೊಂದೊಡಗೂಡಿ ವ್ಯಾಪಾರಕ್ಕಾಗಿ ಜಾಗ್ರತೆಯಿಂದ ಹೊರಟು ಸಮುದ್ರ ದಡದಲ್ಲಿ ಮನೋಹರವಾದ ರತ್ನಸಾರವೆಂಬ ಪಟ್ಟಣದ ಬಳಿ ಶ್ರೀಮಂತನಾದ ಅಳಿಯನೊಡನೆ ವ್ಯಾಪಾರ ಮಾಡುತ್ತಿದ್ದನು.

Sri Vidyabharathi Book Centre, Sringeri

CC-O. In Public Domain. Digitized by eGangotri
ಒಂದು ದಿನ ರಮಣೀಯವಾದ ಆ ಪಟ್ಟಣದ ಒಡೆಯನಾದ ಚಂದ್ರಕೇತುವೆಂಬ ರಾಜೇಂದ್ರನ ಗೃಹವನ್ನು ಕುರಿತು ಇವರೀರ್ವರೂ ಹೋಗುತ್ತಿರಲು, ಆ ಕಾಲದಲ್ಲಿ, ಮಾಡಿದ ಪ್ರತಿಜ್ಞೆಯನ್ನು ಮರೆತ ಆ ವರ್ತಕನನ್ನು ನೋಡಿ ಸತ್ಯನಾರಾಯಣಸ್ವಾಮಿಯು "ಎಲೈ ನಿನಗೆ ಸಹಿಸಲು ಅಶಕ್ಯವಾದ ಬಹು ದುಃಖ ಉಂಟಾಗಲಿ" ಎಂದು ಶಾಪವನ್ನಿತ್ತನು.

ಅದೇ ಸಮಯದಲ್ಲಿ ಕಳ್ಳರು ರಾಜದ್ರವ್ಯವನ್ನಪಹರಿಸಿ ಆ ವರ್ತಕರಿರುವ ಪ್ರದೇಶದ ಕಡೆಗೆ ಬರುತ್ತಿದ್ದರು. ಅಷ್ಟರಲ್ಲಿಯೇ ರಾಜಭಟರು ಕಳ್ಳರನ್ನು ಹುಡುಕುತ್ತಾ ಬರುತ್ತಿರುವುದನ್ನು ಈ ಚೋರರು ಕಂಡು ಅಲ್ಲಿಯೇ ದ್ರವ್ಯವನ್ನು ಬಿಟ್ಟು ಕಣ್ಣಿಗೆ ಕಾಣದ ಕಡೆ ಓಡಿ ಹೋದರು. ಆಗ ರಾಜಭಟರು ಈ ವರ್ತಕರ ಬಳಿಗೆ ಬಂದು ಅಲ್ಲಿ ರಾಜಧನವಿರುವುದನ್ನು ಕಂಡು, ಇವರೇ ಚೋರರೆಂದು ಅವರೀರ್ವರನ್ನೂ ಹಗ್ಗಗಳಿಂದ ಕಟ್ಟಿ ಕಳ್ಳರು ಸಿಕ್ಕಿದರೆಂಬ ಸಂತೋಷದಿಂದ ಎಳೆಯುತ್ತಾ ರಾಜನ ಸಮೀಪಕ್ಕೆ ಕರೆತಂದು ಪ್ರಭುವೇ! ದ್ರವ್ಯ ಸಮೇತರಾದ ಇಬ್ಬರು ಕಳ್ಳರನ್ನು ಬಂಧಿಸಿರುತ್ತೇವೆ. ವಿಚಾರಿಸಿ ಶಿಕ್ಷೆಯನ್ನು ಅಪ್ಪಣೆ ಕೊಡಿಸಿಬೇಕೆಂಬುದಾಗಿ ಹೇಳಲು, ಬಳಿಕ ವರ್ತಕರೀರ್ವರೂ ವಿಚಾರಣೆ ಇಲ್ಲದೇನೆ ರಾಜಾಜ್ಞೆಯಿಂದ ಹಗ್ಗಗಳಿಂದ ಕಟ್ಟಲ್ಪಟ್ಟು, ಕಾರಾಗೃಹದಲ್ಲಿ ಇರಿಸಲ್ಪಟ್ಟರು. ಶ್ರೀ ಸತ್ಯನಾರಾಯಣಸ್ವಾಮಿಯ ಮಹಿಮೆಯಿಂದ ಇವರಾಡುವ ಮಾತುಗಳು ಯಾರಿಗೂ ಕೇಳಿಸುತ್ತಿರಲಿಲ್ಲ. ಚಂದ್ರಕೇತುವೆಂಬ ರಾಜನಿಂದ ಇವರಲ್ಲಿದ್ದ ಸಂಪತ್ತು ಗ್ರಹಿಸಲ್ಪಟ್ಟಿತು. ಇದಲ್ಲದೆ ಸ್ವಾಮಿಯ ಶಾಪದಿಂದ ಅವರ ಮನೆಗಳಲ್ಲಿ ಹೆಂಗಸರಿಗೆ ಬಹು ವ್ಯಸನವುಂಟಾಯಿತು. ಮನೆಯಲ್ಲಿದ್ದ ದ್ರವ್ಯವೆಲ್ಲವೂ ಕಳ್ಳರಿಂದ ಅಪಹರಿಸಲ್ಪಟ್ಟಿತು. ಆದಿವ್ಯಾಧಿಗಳಿಂದಲೂ, ಹಸಿವು ಬಾಯಾರಿಕೆಗಳಿಂದಲೂ, ಅನ್ನಾಕಾಂಕ್ಷಿಗಳಾಗಿ ವರ್ತಕರ ಭಾರ್ಯೆಯರು ಆಹಾರಕ್ಕಾಗಿ ಮನೆಮನೆಗಳನ್ನು ಸುತ್ತುತ್ತಿದ್ದರು. ಒಂದು ದಿನ ಕಲಾವತಿಯು ಹಸಿವಿನ ಬಾಧೆಯಿಂದ ಒಬ್ಬ ಬ್ರಾಹ್ಮಣನ ಮನೆಗೆ ಹೋಗಲು, ಅಲ್ಲಿ ಶ್ರೀ ಸತ್ಯನಾರಾಯಣ

Sri Vidyabharathi Book Centre, Sringeri

CC-O. In Public Domain. Digitized by eGangotri

ವ್ರತವನ್ನು ಮಾಡುತ್ತಿದ್ದ ಅವರನ್ನು ಕಂಡು, ಪೂಜೆಯಾಗುವವರೆಗೂ ಅಲ್ಲಿಯೇ ಇದ್ದು ಸ್ವಾಮಿಗೆ ಹರಿಸಿಕೊಂಡು ಪ್ರಸಾದನವನ್ನು ಭಕ್ಷಿಸಿ ರಾತ್ರಿಯನ್ನು ಕಳೆದು ತನ್ನ ಮನೆಯನ್ನು ಸೇರಿದಳು. ತಾಯಿಯು ಕಲಾವತಿ ಯನ್ನು ಕಂಡು ಅತಿ ಪ್ರೀತಿಯಿಂದ ಮಗಳೇ ರಾತ್ರಿ ಎಲ್ಲಿದ್ದೆ? ನಿನ್ನ ಮನಸ್ಸಿ ನಲ್ಲಿರುವುದನ್ನು ಹೇಳೆನ್ನಲು, ಕಲಾವತಿಯು ಅಮ್ಮಾ ! ಒಬ್ಬ ಬ್ರಾಹ್ಮಣನು ತನ್ನ ಮನೆಯಲ್ಲಿ ಇಷ್ಟಾರ್ಥವನ್ನುಂಟುಮಾಡುವ ಸತ್ಯನಾರಾಯಣ ವ್ರತವನ್ನು ಮಾಡುತ್ತಿದ್ದನು, ಅದನ್ನು ನೋಡುತ್ತಿದ್ದೆನು ಎಂದು ಹೇಳಿದ ಮಗಳ ಮಾತನ್ನು ಕೇಳಿ ಆ ವ್ರತವನ್ನು ಮಾಡಲು ತಾನೂ ಯತ್ನಿಸಿ ಬಹು ಸಂತೋಷದೊಡನೆ ಬಂಧುಗಳಿಂದೊಡಗೂಡಿ ಸತ್ಯನಾರಾಯಣ ವ್ರತವನ್ನು ಮಾಡಿ, ಎಲೈ ಸ್ವಾಮಿಯೇ ? ನನ್ನ ಪತಿಯ ಅಪರಾಧವನ್ನು ಕ್ಷಮಿಸಿ, ಅವರೂ ಅಳಿಯನು ಜಾಗ್ರತೆ ಕ್ಷೇಮವಾಗಿ ಹಿಂದಿರುಗಿ ಬರುವಂತೆ ಅನುಗ್ರಹಿಸಬೇಕೆಂದು ಬೇಡಿಕೊಳ್ಳಲು, ಸಂತುಷ್ಟನಾದ ಸತ್ಯನಾರಾಯಣಸ್ವಾಮಿಯು ಚಂದ್ರಕೇತುವೆಂಬ ರಾಜನಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡು, ಎಲೈ ರಾಜನೇ ! ನಾಳೆ ಪ್ರಾತಃಕಾಲದಲ್ಲಿ ನೀನು ಬಂಧನ-ದಲ್ಲಿಟ್ಟಿರುವ ವರ್ತಕರು ನಿನ್ನಿಂದ ಗ್ರಹಿಸಲ್ಪಟ್ಟಿರುವ ಅವರ ದ್ರವ್ಯದೊಡನೆ ಬಿಡಲ್ಪಡಲಿ; ಇಲ್ಲದಿದ್ದರೆ ರಾಜ್ಯ, ಧನ, ಪುತ್ರಸಮೇತನಾದ ನಿನ್ನನ್ನು ನಾಶಮಾಡುತ್ತೇನೆಂದು ಹೇಳಿ ಅಂತರ್ಧಾನವನ್ನು ಹೊಂದಿದನು. ಆ ಮಾರನೇ ದಿನ ರಾಜನು ಸಿಂಹಾಸನಾರೂಢನಾಗಿ ಸಭಾಜನರಿಗೆ ತನ್ನ ಸ್ವಪ್ನ ವೃತ್ತಾಂತವನ್ನು ತಿಳಿಸಿ, ಬಂಧನದೊಳಿರುವ ವರ್ತಕರನ್ನು ಬಿಡುಗಡೆ ಮಾಡಿ ವರ್ತಕರನ್ನು ಕುರಿತು ವಿಶ್ವಾಸದೊಡನೆ ಇಂತೆಂದನು.

ಎಲೈ ವರ್ತಕರೇ ! ದೈವಯತ್ನದಿಂದ ನಿಮಗೆ ಈ ದುಃಖವು ಪ್ರಾಪ್ತವಾಯಿತು. ಇನ್ನು ನೀವು ಭಯಪಡಬೇಕಾದ್ದಿಲ್ಲವೆಂದು ಹೇಳಿ ಅವರ ಸಂಕೋಲೆಗಳನ್ನು ತೆಗೆಸಿ ವಸ್ತ್ರಾಭರಣಗಳಿಂದಲಂಕರಿಸಿ ಸಂತೋಷಗೊಳಿಸಿ ಪೂರ್ವದಲ್ಲಿ ಅಪಹರಿಸಿದ್ದ ಅವರ ದ್ರವ್ಯಕ್ಕೆ ಎರಡರಷ್ಟು ದ್ರವ್ಯವನ್ನು ಕೊಟ್ಟು,

Sri Vidyabharathi Book Centre, Sringeri

CC-O. In Public Domain. Digitized by eGangotri

ವರ್ತಕರೇ ! ಸಂತೋಷದೊಡನೆ ಇನ್ನು ನಿಮ್ಮ ಸ್ಥಳಕ್ಕೆ ಹೋಗಿ ಬನ್ನಿ ಎನ್ನಲು, ವರ್ತಕರು ರಾಜನಿಗೆ ನಮಸ್ಕರಿಸಿ ಸ್ವಸ್ಥಾನವನ್ನು ಕುರಿತು ತೆರಳಿದರೆಂದು ಸೂತಮುನಿಗಳು ಶೌನಕಾದಿಗಳಿಗೆ ಹೇಳಿದರು.

ಮೂರನೆಯ ಅಧ್ಯಾಯವು ಸಮಾಪ್ತವಾದುದು.

*(ದೇವರಿಗೆ ಹಣ್ಣು, ಕಾಯಿ ನೈವೇದ್ಯ ಮಾಡಿ ಕರ್ಪೂರಾರತಿ ಬೆಳಗಬೇಕು).

ನೀರಾಜನಮಂತ್ರ :

ಓಂ ಸಾಂಗ್ರಹಣ್ಯೈಷ್ಟ್ಯಾಯಜತೇ | ಇಮಾಂ ಜನತಾಗ್ಂ ಸಂಗ್ರಹ್ಣಾನೀತಿ | ದ್ವಾರಶಾರತ್ನೀ ರಶನಾ ಭವತಿ | ದ್ವಾದಶಮಾಸಾ ಸಂವತ್ಸರಃ ಸಂವತ್ಸರ ಮೇವಾ ವರುಂಧೇ | ಮೌಂಜೀ ಭವತಿ | ಊರ್ಗ್ವೈ ಮುಂಜಾಃ | ಊರ್ಜಮೇವಾವರುಂಧೇ ಚಿತ್ರಾ ನಕ್ಷತ್ರಂ ಭಮತಿ | ಚಿತ್ರಂ ವಾ ಏತತ್ಕರ್ಮ | ಯಶ್ವಮೇಧಸ್ಸಮೃದ್ಧ್ಯೈ || ಶ್ರೀ ಸತ್ಯನಾರಾಯಣಸ್ವಾಮಿ ದೇವತಾಭ್ಯೋ ನಮಃ ಮಂಗಳ ನೀರಾಜನಂ ಸಮರ್ಪಯಾಮಿ || ||ಓಂ ತತ್ಸತ್||

ಅನೇನ ತೃತೀಯಾಧ್ಯಾಯ ಕಥಾಶ್ರವಣೇನ ಶ್ರೀ ಸತ್ಯನಾರಾಯಣಸ್ವಾಮಿ ಪ್ರೀಯತಾಂ ||

||ಧರ್ಮಸ್ಯವಿಜಯೋ ಭೂಯಾತ್ ||

ಪ್ರಾತಃಕಾಲದಲ್ಲಿ ಹೇಳುವಂತಾ ಸ್ತೋತ್ರಗಳ ಅಪರೂಪ ಸಂಕಲನ

" ಪ್ರಾತಃಸ್ಮರಾಮಿ "

ಅರ್ಥಸಹಿತ -ಚಿತ್ರಗಳೊಂದಿಗೆ

ದಪ್ಪ ಅಕ್ಷರಗಳಲ್ಲಿ

ಸಂಗ್ರಹ-ಅರ್ಥ-ಶ್ರೀ ಎಂ. ಎಲ್. ರಾಘವೇಂದ್ರರಾವ್

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಲ್ಕನೆಯ ಅಧ್ಯಾಯ

ಪುನಃ ಸೂತರು ಶೌನಕಾದಿಗಳನ್ನು ಕಂಡು ಎಲೈ ಋಷಿಗಳಿರಾ! ಆ ವೈಶ್ಯನು ಅಳಿಯನೊಡನೆ ಮಂಗಳಸ್ನಾನ ಮಾಡಿ ನಿತ್ಯಕರ್ಮಗಳನ್ನು ಪೂರೈಸಿ ಬ್ರಾಹ್ಮಣರಿಗೆ ದ್ರವ್ಯವನ್ನು ದಾನಮಾಡಿ ಸ್ವಗ್ರಾಮವನ್ನು ಕುರಿತು ತೆರಳಿದನು. ಸ್ವಲ್ಪ ದೂರ ಹೋಗುವಷ್ಟರಲ್ಲಿಯೇ ಸತ್ಯನಾರಾಯಣಸ್ವಾಮಿಯು ಸನ್ಯಾಸಿ ವೇಷಧಾರಿಯಾಗಿ ಬಂದು ಎಲೈ ವರ್ತಕನೇ! ನಿನ್ನ ಹಡಗಿನಲ್ಲಿ ಇರುವುದೇನೆಂದು ಕೇಳಿದನು. ಧನಮದಾಂಧರಾದ ವರ್ತಕರು ಹೀಯಾಳಿಸುವುದರಿಂದಲೂ, ಹಾಸ್ಯದಿಂದಲೂ, ಎಲೈ ಸನ್ಯಾಸಿಯೇ ನೀನು ಏತಕ್ಕೆ ಕೇಳುವೆ ? ಹಣವಿರುವು-ದೆಂಬ ಭ್ರಾಂತಿಯಿಂದ ಅಪಹರಿಸಲು ಕೇಳುವಿಯೋ ? ನಮ್ಮ ಹಡಗಿನಲ್ಲಿ ಎಲೆಬಳ್ಳಿಗಳಿರುವುದು, ಮತ್ತೇನೂ ಇಲ್ಲವೆನ್ನಲು, ಈ ರೀತಿ ನುಡಿದ ಅಸತ್ಯ ವಾಕ್ಯವನ್ನು ಕೇಳಿ ಸ್ವಾಮಿಯು ನಿಮ್ಮ ಮಾತು ಯಥಾರ್ಥವಾಗಲಿ ಎಂದು ಹೇಳಿಹೊರಟು ಹೋಗಲು, ವರ್ತಕರು ಸ್ವಲ್ಪದೂರ ಪ್ರಯಾಣ ಮಾಡಿ ಸಮುದ್ರ ದಡದಲ್ಲಿ ಸೇರಿದ ಮೇಲೆ, ನಿತ್ಯಕರ್ಮಗಳನ್ನು ಮುಗಿಸಿಕೊಂಡು ಪುನಃ ಹಡಗನ್ನು ಹತ್ತಿದಾಗ, ಅದರಲ್ಲಿರುವ ಎಲೆ ಬಳ್ಳಿಗಳನ್ನು ಕಂಡು ವರ್ತಕನು ದುಃಖದಿಂದ ಹಾಗೆಯೇ ಮೂರ್ಛೆ ಹೋದನು.

ಪುನಃ ಎಚ್ಚೆತ್ತವನಾಗಿ ದ್ರವ್ಯ ಹೋದ ದುಃಖದಿಂದ ಪ್ರಲಾಪಿಸುತ್ತಿರುವ ಮಾವನನ್ನು ಕಂಡು ಅಳಿಯನು ಎಲೈ ಮಾವನೇ ! ಏಕೆ ವ್ಯಸನಪಡುತ್ತೀಯೆ, ಸನ್ಯಾಸಿಯಿಂದ ಶಾಪ ಕೊಡಲ್ಪಟ್ಟಿತು. ಆದುದರಿಂದಲೇ ನಮ್ಮ ಪದಾರ್ಥ ಗಳೆಲ್ಲವೂ ಈ ರೀತಿಯಾಯಿತು. ಆತನಿಗೆ ನಾವು ಶರಣಾಗತರದಲ್ಲಿ ನಮ್ಮ ಕಷ್ಟಪರಿಹಾರವಾಗುವುದೆನ್ನಲು, ಅಳಿಯನ ಮಾತನ್ನು ಕೇಳಿ ಪುನಃ ಸನ್ಯಾಸಿಯ ಸಮೀಪಕ್ಕೆ ಹೋಗಿ ಭಕ್ತಿಯಿಂದ ನಮಸ್ಕಾರ ಮಾಡಿ ದೀನನಾಗಿ, ಎಲೈ ಯತಿಶ್ರೇಷ್ಠನೇ ! ನಿನ್ನೊಡನೆ ಯಾವ ಅಸತ್ಯವೂ ನನ್ನಿಂದ ಹೇಳಲ್ಪಟ್ಟಿತೋ

Sri Vidyabharathi Book Centre, Sringeri

CC-O. In Public Domain. Digitized by eGangotri
ಅಂಥಾ ಅಪರಾಧವನ್ನು ಕ್ಷಮಿಸು ಎಂಬುದಾಗಿ ನಮಸ್ಕರಿಸಲು, ಆಗ ಯತಿಯು ದುಃಖಿಸುತ್ತಲಿರುವ ವರ್ತಕರನ್ನು ನೋಡಿ ಪ್ರಸನ್ನನಾಗಿ ನಿಜರೂಪ ತೋರಿ, ಎಲೈ ದುರ್ಬುದ್ಧಿಯೇ ! ಈ ನನ್ನ ಮಾತನು ಕೇಳು, ದುಃಖಿಸಬೇಡ; ನನ್ನನ್ನು ಪೂಜಿಸದೆ ಮತ್ತನಾಗಿದ್ದೆಯಾಗಿ ನನ್ನಾಜ್ಞೆಯಿಂದ ಬಾರಿ ಬಾರಿಗೂ ದುಃಖಗಳನ್ನು ಹೊಂದುತ್ತಲಿರುವೆ ಎಂಬುದಾಗಿ ನುಡಿದ ಭಗವದ್ವಾಕ್ಯವನ್ನು ಕೇಳಿ ವರ್ತಕನು ಸ್ತೋತ್ರಮಾಡಲುಪಕ್ರಮಿಸಿದನು.

ಎಲೈ ಸ್ವಾಮಿಯೇ, ಬ್ರಹ್ಮಾದಿ ಸಮಸ್ತದೇವತೆಗಳೂ ಕೂಡ ನಿನ್ನ ಆಶ್ಚರ್ಯಕರಗಳಾದ ಗುಣಗಳನ್ನು ತಿಳಿಯದೆ ಮಾಯಿಯಿಂದ ಮೋಹಿತರಾಗಿರುವಲ್ಲಿ, ಮೂಢರಾದ ನಾವು ನಿನ್ನ ಸ್ವರೂಪವನ್ನೆಂತು ತಿಳಿಯಲು ಸಾಧ್ಯ ? ವಿಧ್ಯುಕ್ತವಾಗಿ ನಿನ್ನ ಪೂಜೆಯನ್ನು ಖಂಡಿತ ಮಾಡುವೆವು.ನಮ್ಮಲ್ಲಿ ಕರುಣಿಸು. ಪೂರ್ವದಲ್ಲಿ ನಮ್ಮಿಂದ ಮಾಡಲ್ಪಟ್ಟ ಅಪರಾಧವನ್ನು ಕ್ಷಮಿಸಿ ನಮ್ಮನ್ನು ರಕ್ಷಿಸು ಎಂದು ಭಕ್ತಿಯಿಂದ ಪ್ರಾರ್ಥಿಸಲು, ಸ್ವಾಮಿಯು ಅವರಿಗೆ ಅನೇಕ ವರಗಳನ್ನೂ, ಪೂರ್ವಧನವನ್ನೂ ಅನುಗ್ರಹಿಸಿ ಅಂತರ್ಗತನಾದನು.

ನಂತರ ವರ್ತಕರು ಹಡಗಿನಲ್ಲಿ ದ್ರವ್ಯವು ತುಂಬಿರುವುದನ್ನು ಕಂಡು ಸತ್ಯನಾರಾಯಣಸ್ವಾಮಿಯ ದಯದಿಂದ ತಮ್ಮ ಇಷ್ಟಾರ್ಥಗಳು ನೆರವೇರಿತೆಂದು ಸ್ವಜನರಿಂದೊಡಗೂಡಿ ಯಥಾವಿಧಿಯಾಗಿ ಸ್ವಾಮಿಯನ್ನು ಪೂಜಿಸಿ ಆತನ ಆನುಗ್ರಹದಿಂದ ಸಂತೋಷಯುತರಾಗಿ ಸಕಲ ಸಂಭ್ರಾತರುಗಳೊಡನೆ ತಮ್ಮ ದೇಶದ ಸಮೀಪಕ್ಕೆ ಬಂದು ಅಳಿಯನನ್ನು ಕುರಿತು ರತ್ನಪುರವೆಂಬ ನಮ್ಮ ದೇಶವು ಸಿಕ್ಕಿತು ಎಂದು ಹೇಳಿ ತಮ್ಮಾಗಮನದ ಸಮಾಚಾರವನ್ನು ಸೇವಕನ ಮೂಲಕ ಮನೆಗೆ ಕಳುಹಿಸಿದನು. ಆ ದೂತನು ಪಟ್ಟಣವನ್ನು ಪ್ರವೇಶಿಸಿ ವರ್ತಕನ ಮನೆ ಸೇರಿ ಅಮ್ಮಾ, ಅಳಿಯನೊಡನೆ ನಿಮ್ಮ ಪತಿಯು ದ್ರವ್ಯಗಳಿಂದಲೂ ಬಂಧುಗಳಿಂದಲೂ ಕೂಡಿ ಈ ಪಟ್ಟಣದ ಬಳಿಗೆ ಬರುತ್ತಿದ್ದಾರೆಂಬ

Sri Vidyabharathi Book Centre, Sringeri

CC-O. In Public Domain. Digitized by eGangotri

ಶುಭವಾರ್ತೆಯನ್ನು ತಿಳಿಸಲು, ಪತಿವ್ರತೆಯಾದ ವರ್ತಕನ ಸತಿಯು ಸಂತೋಷದಿಂದ ಸತ್ಯನಾರಾಯಣಸ್ವಾಮಿಯನ್ನು ಪೂಜಿಸಿ ಮಗಳನ್ನು ಕುರಿತು;

ಪತಿಗಳ ದರ್ಶನಾರ್ಥವಾಗಿ ಶೀಘ್ರವಾಗಿ ಹೋರಡೋಣ ಸಿದ್ಧಳಾಗು ಎಂದು ಹೇಳಲು, ತಾಯಿಯ ಮಾತನ್ನು ಕೇಳಿ ಕಲಾವತಿ ಮಾಡುತ್ತಿದ್ದ ವ್ರತವನ್ನು ಮುಗಿಸಿ ಪ್ರಸಾದವನ್ನು ಭಕ್ಷಿಸದೆ ಪತಿಯ ದರ್ಶನಾರ್ಥವಾಗಿ ತಾಯಿಯೊಡನೆ ತೆರಳಿದಳು. ಇದರಿಂದ ಕೋಪಗೊಂಡ ಸತ್ಯನಾರಾಯಣಸ್ವಾಮಿಯು ಧನಯುಕ್ತವಾದ ಹಡಗಿನೊಂದಿಗೆ ಅವಳ ಪತಿಯನ್ನು ಜಲದಲ್ಲಿ ಮುಳು ಗಿಸಿದನು. ಬಳಿಕ ಕಲಾವತಿಯು ಪತಿಯನ್ನು ಕಾಣದೆ ದುಃಖದಿಂದಳುತ್ತಾ ಭೂಮಿಯಲ್ಲಿ ಬಿದ್ದಳು. ತಾಯಿ ಲೀಲಾವತಿಯು ಮಗಳ ಅವಸ್ಥೆ ಕಂಡು ಅಳುತ್ತಾ ಪತಿಯೊಡನೆ, ಹಡಗಿನೊಡನೆ ಇದ್ದ ಅಳಿಯನು ತಕ್ಷಣದಲ್ಲೇ ಹೇಗೆ ಮಾಯವಾದನೋ ?ಇದೆಲ್ಲಾ ಅನಾಹುತವು ಸತ್ಯನಾರಾಯಣಸ್ವಾಮಿಯ ಮಹಾತ್ಮೆಯಿಂದುಂಟಾಗಿದೆ. ಆತನ ಮಹತ್ವ ತಿಳಿಯಲು ಯಾರಿಗೆ ತಾನೆ ಶಕ್ಯವು ಎಂಬುದಾಗಿ ಹೇಳಿ ತನ್ನ ಮಗಳನ್ನು ಅಪ್ಪಿಕೊಂಡು ದುಃಖಿಸಿದಳು.

ಪತಿಯನ್ನು ಕಳೆದುಕೊಂಡು ದುಃಖಿತಳಾದ ಕಲಾವತಿಯು ತನ್ನ ಪತಿ ನಷ್ಟವಾದ್ದರಿಂದ ವ್ಯಥೆಯಿಂದ ಪತಿಯ ಪಾದುಕೆಯನ್ನು ತೆಗೆದುಕೊಂಡು ಅದರ ಕೂಡ ಸಹಗಮನವನ್ನು ಮಾಡಬೇಕೆಂದು ನಿಶ್ಚಯಿಸಲು, ಮಗಳ ಕಷ್ಟವನ್ನು ನೋಡಿದವನಾಗಿ ಆ ವೈಶ್ಯನೂ, ಆತನ ಪತ್ನಿಯೂ ಶೋಕದಿಂದ ಸಂತಪ್ತರಾಗಿ ಆಲೋಚನೆ ಮಾಡುತ್ತಾ ಈ ಹಡಗು ಅದೃಶ್ಯವಾಗಿರುವುದು ;ಸತ್ಯನಾರಾಯಣನೇ ಮಾಡಿದ್ದಾನೆ, ಅಥವಾ ನಾನು ಸತ್ಯನಾರಾಯಣ ದೇವರ ಮಾಯಾಪಾಶದಿಂದ ಭ್ರಾಂತನಾಗಿ ಇರುವೆನೋ ಏನೋ ? ಇದು ಯಾವುದೂ ತಿಳಿಯದು ಎಂದು ಯೋಚಿಸಿ, ಎಲ್ಲರ ಸಮಕ್ಷಮದಲ್ಲಿ ನಾನು ಆಪದ್ಬಾಂದವನಾದ ಸತ್ಯನಾರಾಯಣ ದೇವರ ಪೂಜೆ ಮಾಡುತ್ತೇನೆ. ಹೀಗೆ ಪ್ರಾರ್ಥನಾ ವಚನವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri
ಹೇಳಿ ಸತ್ಯನಾರಾಯಣನಿಗೆ ಪುನಃ ಭೂಮಿಯ ಮೇಲೆ ದೀರ್ಘವಾಗಿ ನಮಸ್ಕಾರ ಮಾಡಿದನು. ಆಗ ದೀನಪಾಲಕನಾದ ಸತ್ಯನಾರಾಯಣನು ಸಂತುಷ್ಟನಾದನು. ತದನಂತರ ಭಕ್ತವತ್ಸಲನಾದ ಸತ್ಯನಾರಾಯಣ ಕೃಪೆಯಿಂದ ಆಕಾಶವಾಣಿ ನುಡಿದದ್ದೇನೆಂದರೆ -

ಎಲೈ ವೈಶ್ಯನೇ, ನಿನ್ನ ಮಗಳು ಪ್ರಸಾದ ತ್ಯಾಗ ಮಾಡಿ ತನ್ನ ಪತಿಯನ್ನು ನೋಡಲು ಬಂದಿದ್ದರಿಂದ ಆಕೆಯ ಪತಿ ನಿಶ್ಚಯವಾಗಿ ಅದೃಶ್ಯನಾಗಿದ್ದಾನೆ. ಇದಕೋಸ್ಕರ ಮನೆಗೆ ಹೋಗಿ ಸ್ವಲ್ಪವಾದರೂ ಪ್ರಸಾದ ಭಕ್ಷಣೆ ಮಾಡಿದರೆ ಪತಿಯನ್ನು ಹೊಂದುವಳೆಂದು ನುಡಿಯಲು, ಆಕಾಶವಾಣಿಯ ವಾಕ್ಯವನ್ನು ಕೇಳಿದವಳಾಗಿ ಅತಿ ತ್ವರೆಯಿಂದ ಸ್ವಗೃಹಕ್ಕೆ ಹೋಗಿ ಪ್ರಸಾದ ಭಕ್ಷಣೆಯನ್ನು ಮಾಡಿ ಹಿಂದಿರುಗಲು, ಅಲ್ಲಿ ಪತಿಯನ್ನು ಕಂಡು ಕಲಾವತಿಯು ಆನಂದದಿಂದ ಎಲೈ ತಂದೆಯೇ ! ಈಗ ಮನೆಗೆ ಹೋಗೋಣ ನಡೆಯಿರಿ, ವಿಳಂಬ ಏತಕ್ಕೆ ಮಾಡುತ್ತೀರಿ ?ಎನ್ನಲು, ಮಗಳ ಮಾತಿನಿಂದ ಆ ವೈಶ್ಯನಿಗೆ ಬಹಳ ಸಂತೋಷವುಂಟಾಯಿತು. ಅನಂತರ ಯಥಾವಿಧಿಯಿಂದ ಶ್ರೀ ಸತ್ಯನಾರಾಯಣ ದೇವರ ಪೂಜೆ ಮಾಡಿದನು ಮತ್ತು ಪ್ರತಿಮಾಸದಲ್ಲೂ ಪೌರ್ಣಿಮಾ ಸಂಕ್ರಾಂತಿ ಈ ವರ್ಷಕಾಲದಲ್ಲಿ ಸತ್ಯನಾರಾಯಣ ಪೂಜೆಯನ್ನು ಮಾಡುವಂಥಾವನಾದನು. ಈ ಪ್ರಕಾರ ಅವನು ವಿಧಿಯುಕ್ತ ಸತ್ಯನಾರಾಯಣ ವ್ರತಾಚರಣೆಯನ್ನು ಮಾಡಿ ಈ ಮರ್ತ್ಯಲೋಕದಲ್ಲಿ ಸಕಲ ಸುಖಗಳನ್ನು ಅನುಭವಿಸಿ ನಂತರ ಸತ್ಯಲೋಕ ಹೊಂದಿದನು ಎಂಬುದಾಗಿ ಸೂತಪುರಾಣಿಕರು ಶೌನಕಾದಿ ಋಷಿಗಳಿಗೆ ನಿರೂಪಣೆ ಮಾಡಿದರು.

ನಾಲ್ಕನೆಯ ಅಧ್ಯಾಯ ಸಮಾಪ್ತಿ.

***(ದೇವರಿಗೆ ಹಣ್ಣು, ಕಾಯಿ ನೈವೇದ್ಯ ಮಾಡಿ ಕರ್ಪೂರಾರತಿ ಬೆಳಗಬೇಕು)**

Sri Vidyabharathi Book Centre, Sringeri

CC-O. In Public Domain. Digitized by eGangotri

ನೀರಾಜನಮಂತ್ರ :

ಓಂ ಹಿರಣ್ಯಪಾತ್ರಂ ಮಧೋಃ ಪೂರ್ಣಂ ದಧಾತಿ !ಮಧುವ್ಯೋಽಸಾನೀತಿ ! ಏಕಧಾ (ಬ್ರಹ್ಮಣ)ಮುಹ್ಮಣ ಉಪಹರತಿ | ಏಕದೈವ ಯಜಮಾನಃ ಆಯುಸ್ತೇಜೋ ದಧಾತಿ || ಶ್ರೀ ಸತ್ಯನಾರಾಯಣಸ್ವಾಮಿ ದೇವತಾಭ್ಯೋ ನಮಃ ಮಂಗಳ ನೀರಾಜನಂ ಸಮರ್ಪಯಾಮಿ ||

|| ಶ್ರೀರಸ್ತು || || ಶುಭಂ ಭವತು ||

ಅನೇನ ಚತುರ್ಥಾಧ್ಯಾಯ ಕಥಾ ಶ್ರವಣೇನ ಶ್ರೀ ಸತ್ಯನಾರಾಯಣಸ್ವಾಮಿ ಪ್ರೀಯತಾಂ ||

******

ಪುಟ್ಟ ಮಕ್ಕಳಿಗಾಗಿ ಸ್ತೋತ್ರ ಕೈಪಿಡಿ

"ಪುಟಾಣಿ ಸ್ತೋತ್ರಗಳು"

ಬಣ್ಣದ ಚಿತ್ರಗಳ ಸಹಿತ

ಸಂಗ್ರಹ : ಪೃಥ್ವಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಐದನೆಯ ಅಧ್ಯಾಯ

ಸೂತಪುರಾಣಿಕರು ಮತ್ತೆ ಹೇಳುತ್ತಾರೆ - ಎಲೈ ಶೌನಕಾದಿ ಋಷಿಗಳಿರಾ ! ಕೇಳಿರಿ.

ನಾನು ನಿಮಗೆ ಎರಡನೆಯ ಸಲ ಇನ್ನೂ ಒಂದು ಇತಿಹಾಸ ಹೇಳುವೆನು. ಪೂರ್ವದಲ್ಲಿ ಅಂಗಧ್ವಜನೆಂಬ ರಾಜನು ಸತ್ಯನಾರಾಯಣಸ್ವಾಮಿ ವ್ರತದ ಪ್ರಸಾದ ತ್ಯಾಗ ಮಾಡಿದ್ದರಿಂದ ಅತಿಯಾದ ದುಃಖವನ್ನು ಹೊಂದಿದನು. ಆತನು ಒಂದು ದಿನ ಅರಣ್ಯದಲ್ಲಿ ಬೇಟೆಯಾಡುತ್ತಾ ಮೃಗಗಳನ್ನು ಸಂಹಾರಮಾಡಿ ತನ್ನ ನಗರ ಸಮೀಪವಾದ ಒಂದು ವಟವೃಕ್ಷದ ಸಮೀಪದಲ್ಲಿ ಬಂದು ನಿಲ್ಲುವವನಾದನು. ಅಲ್ಲಿ ಗೋಪಾಲಕರು ತಮ್ಮ ಬಂಧುಗಳಿಂದ ಕೂಡಿ ಸಂತುಷ್ಟರಾದವರಾಗಿ ಭಕ್ತಿಯುಕ್ತ ಅಂತಃಕರಣವುಳ್ಳವರಾಗಿ ಸತ್ಯನಾರಾಯಣ ಪೂಜೆಯನ್ನು ಮಾಡುತ್ತಿದ್ದರು. ಇದನ್ನು ನೋಡಿದ ಈ ರಾಜನು ಅಹಂಕಾರದಿಂದ ಅಲ್ಲಿಗೆ ಹೋಗಲೂ ಇಲ್ಲ ಮತ್ತು ಆ ಸತ್ಯನಾರಾಯಣನನ್ನು ಕುರಿತು ನಮಸ್ಕಾರವನ್ನೂ ಮಾಡಲಿಲ್ಲ.

ಆದರೂ ಸಮಸ್ತ ಗೋಪಾಲಕರೆಲ್ಲರೂ ಸತ್ಯನಾರಾಯಣ ಪೂಜೆಯ ಪ್ರಸಾದವನ್ನು ರಾಜನಿಗೆ ನೀಡಲು, ರಾಜನು ಪ್ರಸಾದ ಪರಿತ್ಯಾಗವನ್ನು ಮಾಡಿದ ಕಾರಣ ಅತಿ ದುಃಖವನ್ನು ಹೊಂದಿದನು. ಆ ರಾಜನ ನೂರು ಮಂದಿ ಮಕ್ಕಳು, ಧನಧಾನ್ಯ ಮೊದಲಾದ ಐಶ್ವರ್ಯವೆಲ್ಲವೂ ನಾಶವಾಯಿತು. ಆಗ ರಾಜನು ಇದು ಸಕಲವೂ ಸತ್ಯನಾರಾಯಣ ದೇವರ ಪ್ರಸಾದ ತಿರಸ್ಕರಿಸಿದ್ದರಿಂದ ನಷ್ಟ ಆಗಿರಬಹುದೆಂದು, ಯಾವ ಸ್ಥಳದಲ್ಲಿ ಸತ್ಯದೇವರ ಪೂಜೆ ಆಯಿತೋ, ಆ ಸ್ಥಳಕ್ಕೆ ಪುನಃ ಹೋಗಿ ಗೋಪಾಲಕರ ಸಹಿತನಾಗಿ ಭಕ್ತಿ ಮತ್ತು ಶ್ರದ್ಧಾಯುಕ್ತನಾಗಿ ಯಥಾವಿಧಿಯಿಂದ ಸತ್ಯನಾರಾಯಣ ದೇವರ ಪೂಜೆಯನ್ನು ಮಾಡಿದನು. ಅನಂತರ ಆ ರಾಜನು ಸತ್ಯನಾರಾಯಣ ದೇವರ ಪ್ರಸಾದದ ದೆಸೆಯಿಂದ ಧನಧಾನ್ಯ ಪುತ್ರಾದಿ

Sri Vidyabharathi Book Centre, Sringeri

CC-0. In Public Domain. Digitized by eGangotri

ಐಶ್ವರ್ಯವನ್ನು ಪುನಃ ಹೊಂದಿದವನಾಗಿ ಇಹಲೋಕದಲ್ಲಿ ಸುಖವನ್ನನುಭವಿಸಿ ಅಂತ್ಯಕಾಲದಲ್ಲಿ ಸಾಕ್ಷಾತ್ ವೈಕುಂಠ ಲೋಕವನ್ನು ಹೊಂದಿದನು.

ಈ ಪ್ರಕಾರವಾಗಿ ಪರಮ ದುರ್ಲಭ್ಯವಾದ ಈ ವ್ರತವನ್ನು ಯಾರು ಮಾಡುತ್ತಾರೋ ಅವರಿಗೆ ಸತ್ಯನಾರಾಯಣ ದೇವರ ಪ್ರಸಾದದಿಂದ ಧನಧಾನ್ಯ ಮುಂತಾದ್ದು ಪ್ರಾಪ್ತವಾಗುತ್ತದೆ ಮತ್ತು ಯಾವನು ದರಿದ್ರನಾಗಿರುತ್ತಾನೋ ಅವನಿಗೆ ಧನಪ್ರಾಪ್ತಿ ಆಗುತ್ತದೆ. ಅವನು ಎಲ್ಲಾ ಕಷ್ಟಗಳಿಂದ ಮುಕ್ತನಾಗುತ್ತಾನೆ. ಯಾವ ಮನುಷ್ಯನು ಭೀತಿ ಹೊಂದಿರುತ್ತಾನೋ ಅವನು ಭಯದಿಂದ ಮುಕ್ತನಾಗುತ್ತಾನೆ. ಅವರುಗಳು ಇಹಲೋಕದಲ್ಲಿ ಸಂಪೂರ್ಣ ಸುಖವನ್ನನುಭವಿಸಿ ಅಂತ್ಯಕಾಲದಲ್ಲಿ ವೈಕುಂಠವನ್ನು ಹೊಂದುತ್ತಾರೆ. ಇದು ಸತ್ಯವಾದದ್ದು. ಮತ್ತೆ ಸೂತ ಮಹಾಮುನಿಗಳು ಹೇಳುತ್ತಾರೆ.

ಎಲೈ ಶೌನಕಾದಿಗಳೇ ! ಈ ಪ್ರಕಾರ ಸತ್ಯನಾರಾಯಣ ದೇವರ ವ್ರತವನ್ನು ನಾನು ನಿಮಗೆ ಕಥನ ಮಾಡಿಸಿರುತ್ತೇನೆ. ಈ ವ್ರತವನ್ನು ಮಾಡಿದ್ದಾದರೆ, ಮನುಷ್ಯರು ಸಂಪೂರ್ಣ ದುಃಖದೆಶೆಯಿಂದ ಸತ್ಯವಾಗಿ ಮುಕ್ತರಾಗುತ್ತಾರೆ. ಕಲಿಯುಗದಲ್ಲಿ ಸತ್ಯನಾರಾಯಣ ಪೂಜೆಯು ವಿಶೇಷವಾಗಿ ಕೋರಿದ ಫಲವನ್ನು ಕೊಡತಕ್ಕಂಥಾದ್ದು. ಈ ಸತ್ಯನಾರಾಯಣನನ್ನು ಕೆಲವರು ಕಾಲವೆಂದು ಹೇಳುತ್ತಾರೆ, ಇನ್ನೂ ಕೆಲವರು ಸತ್ಯದೇವರೆನ್ನುತ್ತಾರೆ. ಹೀಗೆ ನಾನಾ ಪ್ರಕಾರವಾದ ರೂಪ ಧಾರಣೆ ಮಾಡಿ ಸಕಲ ಶ್ರದ್ಧಾಭಕ್ತಿಯುತರಾದ ಭಕ್ತರುಗಳಿಗೆ ಈಪ್ಸಿತ ಫಲಗಳನ್ನು ಕೊಡತಕ್ಕವನು.

ಹೀಗೆ ಸನಾತನನಾದ ಭಗವಂತನು ಈ ಕಲಿಯುಗದಲ್ಲಿ ಸತ್ಯನಾರಾಯಣ ರೂಪವನ್ನು ಧರಿಸಿರುತ್ತಾನೆಂದು ಸೂತರು ಹೇಳುತ್ತಾರೆ. ಮುನಿಗಳೇ, ಯಾರು ಈ ಸತ್ಯನಾರಾಯಣ ಸ್ವಾಮಿಯ ವ್ರತವನ್ನು ದಿನವೂ ಶ್ರವಣ ಮಾಡುತ್ತಾರೋ ಅಥವಾ ಪಠಣ ಮಾಡುತ್ತಾರೋ ಅವರ ಸಮಸ್ತವಾದ ದುಃಖವೂ ಸತ್ಯದೇವರ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಸಾದದಿಂದ ನಾಶ ಹೊಂದುವಂಥಾದ್ದಾಗಿ ಸುಖದಿಂದ ಇರುತ್ತಾರೆ. ಇದರಲ್ಲಿ ಸಂಶಯವಿಲ್ಲವೆಂಬುದಾಗಿ ಸೂತಪುರಾಣೀಕರು ಶೌನಕಾದಿ ಋಷಿಗಳಿಗೆ ಹೇಳಿದರೆಂಬಲ್ಲಿಗೆ ಐದನೇ ಅಧ್ಯಾಯವು ಸಮಾಪ್ತವು.

*(ಹಣ್ಣು, ಕಾಯಿಗಳಿಂದ ಸ್ವಾಮಿಗೆ ನೈವೇದ್ಯವನ್ನು ಸಮರ್ಪಿಸಿ ಮಂಗಳಾರತಿ ಬೆಳಗಿ ಎಲ್ಲರಿಗೂ ಕೊಟ್ಟು, ತೀರ್ಥಪ್ರಸಾದವನ್ನು ಎಲ್ಲರಿಗೂ ನೀಡಿ ತಾನೂ ಸ್ವೀಕರಿಸಿ ಬಂಧುವರ್ಗ, ಮಿತ್ರರೊಂದಿಗೆ ಭೋಜನವನ್ನು ಮಾಡಬೇಕು).

ನೀರಾಜನಮಂತ್ರ :

ಆ ಶಾಸ್ತೇಽಯಂ ಯಜಮಾನೋಽಸೌ | ಆಯುರಾಶಾಸ್ತೇ | ಸುಪ್ರಜಾಸ್ತ್ವ-ಮಾಶಾಸ್ತೇ | ಸಜಾತವನಸ್ಯಾಮಾಶಾಸ್ತೇ | ಉತ್ತರಾಂ ದೇವಯಜ್ಯಾಮಾಶಾಸ್ತೇ | ಭೂಯೋ ಹವಿಷ್ಕರಣಮಾಶಾಸ್ತೇ | ದಿವ್ಯಂದಾಮಾಶಾಸ್ತೇ | ವಿಶ್ವಂ ಪ್ರಿಯಮಾಶಾಸ್ತೇ | ಯದಸೇನ ಹವಿಷಾಽಽಶಾಸ್ತೇ | ತದಶ್ಯಾತ್ ತದೃದ್ಧ್ಯಾತ್ | ತದಸ್ಮೈ ದೇವಾರಾಸಂತಾಂ | ತದಗ್ನಿರ್ದೇವೋ ದೇವೇಭ್ಯೋ ವನತೇ | ವಯಮಗ್ನೇರ್ಮಾನುಷಾಃ | ಇಷ್ಟಂ ಚ ವೀತಂ ಚ | ಉಭೇ ಚ ನೋ ದ್ಯಾವಾ ಪೃಥಿವೀ ಅಗ್ಂಂ ಹಸಸ್ಪಾತಾಂ | ಇಹಗತಿರ್ವಾ ಮಸ್ಯೇದಂ ಚ | ನಮೋ ದೇವೇಭ್ಯಃ || ಶ್ರೀ ಸತ್ಯನಾರಾಯಣಸ್ವಾಮಿ ದೇವತಾಭ್ಯೋ ನಮಃ |ದಿವ್ಯ ಮಂಗಳ ನೀರಾಜನಂ ಸಮರ್ಪಯಾಮಿ ||

ಅನೇನ ಪಂಚಮೋಧ್ಯಾಯ ಕಥಾ ಶ್ರವಣೇನ ಶ್ರೀ ಸತ್ಯನಾರಾಯಣಸ್ವಾಮಿ ಪ್ರೀಯತಾಂ ||

||ಹರಿಃ ಓಂ ತತ್ಸತ್ ಶ್ರೀ ಕೃಷ್ಣಾರ್ಪಣಮಸ್ತು ||

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಸತ್ಯನಾರಾಯಣಸ್ವಾಮಿ ವ್ರತೋದ್ಯಾಪನವಿಧಿ

ಶ್ರೀ ಸತ್ಯನಾರಾಯಣಸ್ವಾಮಿಯ ವ್ರತವನ್ನು ಯಾವಾಗ ಬೇಕಾದರೂ ಮಾಡಬಹುದು. ನಾಲ್ಕು ವರ್ಷಗಳ ಕಾಲ ತಪ್ಪದೆ ಪ್ರತಿ ತಿಂಗಳಲ್ಲಿಯೂ ವ್ರತವನ್ನು ಆಚರಿಸಿ ಅನಂತರ ಉದ್ಯಾಪನೆಯನ್ನು ನೆರವೇರಿಸಬೇಕು.

ಶ್ರೀ ಸತ್ಯನಾರಾಯಣಸ್ವಾಮಿಯ ಉದ್ಯಾಪನೆಯನ್ನು ಆಚರಿಸತಕ್ಕವರು ಆಚರಣೆಯ ಹಿಂದಿನ ದಿನ ನಿರಾಹಾರಿಯಾಗಿ ಶರೀರಶುದ್ಧಿಯನ್ನು ಮಾಡಿ ಕೊಳ್ಳತಕ್ಕದ್ದು. ಮಾರನೆಯ ದಿನ ಬೆಳಗ್ಗೆ ಸಂಸಾರ ಸಮೇತರಾಗಿ ನದಿಯಲ್ಲಿ ಸ್ನಾನ ಸಂಧ್ಯಾವಂದನೆ ಮುಂತಾದ ನಿತ್ಯವಿಧಿಗಳನ್ನು ತೀರಿಸಬೇಕು. ತಾಮ್ರದ ಕಲಶದಲ್ಲಿ ನೀರನ್ನು ತುಂಬಿ ಆವಾಹನಾದಿ ಷೋಡಶೋಪಚಾರ ಪೂಜೆ ಮಾಡಬೇಕು. ನಂತರ ಮಂಗಳದ್ರವ್ಯಗಳ ಸಮೇತ ಸುವಾಸಿನಿಯರು ಕಲಶವನ್ನು ತರಬೇಕು. ಕಲಶವನ್ನು ಈಶಾನ್ಯ ದಿಕ್ಕಿನಲ್ಲಿ ಶುಭ್ರವಾದ ಸ್ಥಳದಲ್ಲಿ ಇಡಬೇಕು. ದಂಪತಿಗಳು ಸಾಯಂಕಾಲ ಅಭ್ಯಂಜನ ಸ್ನಾನ ಮಾಡಿ ಶುದ್ಧವಾದ ಪ್ರದೇಶದಲ್ಲಿ ಪುಣ್ಯಾಹವಾಚನೆ, ಹಿರಣ್ಯದ್ರವ್ಯದಿಂದ ನಾಂದೀಪೂಜಾಭ್ಯುದಯಗಳನ್ನು ಮಾಡಿ ಆಚಾರ್ಯಾದಿ ಋತ್ವಿಕ್ಕುಗಳನ್ನು ನೇಮಿಸಿಕೊಂಡು ಅನಂತರ ವೈದಿಕ ಮಂತ್ರಗಳಿಂದ ಕಲಶ ಸ್ಥಾಪನೆ ನೆರವೇರಿಸಬೇಕು. ಗೋಧೂಮಾದಿ ಧಾನ್ಯಗಳನ್ನು ಮಿಶ್ರವಾಗದಂತೆ ಒಂದರ ಮೇಲೆ ಒಂದನ್ನು ರಾಶಿಯಾಗಿ ಹಾಕಬೇಕು. ಉದ್ಯಾಪನೆ ಮಾಡತಕ್ಕವರು ತಮ್ಮ ಶಕ್ತಿಗನುಸಾರವಾಗಿ ಬಂಗಾರ, ಬೆಳ್ಳಿ, ತಾಮ್ರ ಅಥವಾ ಮಣ್ಣಿನ ಹತ್ತು ಕಲಶಗಳನ್ನು ನೂಲಿನಿಂದ ಸುತ್ತಿ ಧಾನ್ಯರಾಶಿಯ ಮೇಲೆ ಇಡಬೇಕು. ಆ ಹತ್ತು ಕಲಶಗಳಲ್ಲಿ ಪಂಚಗವ್ಯ, ಪಂಚತ್ವಕ್, ಪಂಚಪಲ್ಯ, ಚಿನ್ನದ ಪಂಚರತ್ನಗಳನ್ನು ಮತ್ತು ಚಿನ್ನದ ಅಥವಾ ಬೆಳ್ಳಿಯ ಪ್ರತಿಮೆಗಳನ್ನು ಇರಿಸಬೇಕು. ನಂತರ ಉದಕವನ್ನು ತುಂಬಿಸಬೇಕು. ಮಂಗಳದ್ರವ್ಯಗಳಿಂದ ಶುದ್ಧಿಮಾಡಿದ ತೆಂಗಿನಕಾಯಿಗಳನ್ನು ಮಾವಿನ ಗುತ್ತಿಗಳ ಸಮೇತ ಕಲಶದ ಮೇಲೆ ಇರಿಸಬೇಕು. ಪ್ರತಿ ಕಲಶವನ್ನೂ ನೂತನ ವಸ್ತ್ರಗಳಿಂದ ಸುತ್ತಿಡಬೇಕು. ಆಯಾಯ ದೇವತಾ ಮಂತ್ರಗಳಿಂದ ಕಲಶಗಳಲ್ಲಿ ದೇವತೆಗಳನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri
ಆವಾಹನೆ ಮಾಡಬೇಕು. ಉದ್ಯಾಪನೆಗೆ ಸತ್ಯನಾರಾಯಣಸ್ವಾಮಿಯು ಪ್ರಧಾನನು, ಅಧಿದೇವತೆ ಬ್ರಹ್ಮನು, ಪ್ರತ್ಯಧಿದೇವತೆ ಈಶ್ವರ, ಗಣಪತಿ, ಗೌರಿ, ವರುಣ, ಬ್ರಹ್ಮ, ವಿಷ್ಣು, ಮಹೇಶ್ವರ, ಸೂರ್ಯಾದಿ ನವಗ್ರಹಗಳು, ಅಷ್ಟದಿಕ್ಪಾಲಕರು, ದುರ್ಗಾ, ಕ್ಷೇತ್ರಪಾಲಕ, ವಾಸ್ತುಪುರುಷ ಇವರು ಅಂಗದೇವತೆಗಳು, ಇವರುಗಳನ್ನು ಕಲ್ಪೋಕ್ತವಾಗಿ ಪೂಜಿಸಬೇಕು. ಇದನ್ನು ಪ್ರತಿಯಾಮದಲ್ಲೂ ಮಾಡಬೇಕು. ಬೆಳಿಗ್ಗೆ ಸ್ನಾನ ಸಂಧ್ಯಾವಂದನೆಗಳನ್ನು ಮಾಡಿ ಆಚಾರ್ಯಾದಿ ಸಹಿತವಾಗಿ ಹೋಮ ಮಾಡಬೇಕು. ಹೋಮ ದ್ರವ್ಯಗಳಾದ ಸಮಿತ್ತು, ಚರು, ಜೇನುತುಪ್ಪ, ತುಪ್ಪಗಳನ್ನು ವಿಶೇಷವಾಗಿ ಉಪಯೋಗಿಸಿ ಅಷ್ಟೋತ್ತರ ಸಹಸ್ರ, ಅಷ್ಟೋತ್ತರ ಶತ, ಇಪತ್ತೆಂಟಾವರ್ತಿ ಗಾಯತ್ರಿ, ತದ್ವಿಷ್ಣೋ ಎಂಬ ಮಂತ್ರ, ಅಂತೋದೇವ ಎಂಬ ಮಂತ್ರ ಇವುಗಳಿಂದ ಹೋಮ ಮಾಡಬೇಕು. ನಂತರ ಲಕ್ಷ್ಮೀಪ್ರೀತ್ಯರ್ಥವಾಗಿ ಲಕ್ಷ್ಮೀ, ಗಾಯತ್ರೀ ಸಹಸ್ರನಾಮ ಅಥವಾ ಅಷ್ಟೋತ್ತರಗಳಿಂದ ಹೋಮ ಮಾಡಬೇಕು.

ಪುರುಷಸೂಕ್ತಹೋಮ, ಶ್ರೀಸೂಕ್ತಗಳನ್ನು ಜಪಿಸಿದ ನಂತರ ಪೂರ್ಣಾಹುತಿ ಕೊಟ್ಟು ಹೋಮ ಸಮಾಪ್ತಿಯನ್ನು ಮಾಡಬೇಕು. ಉದ್ಯಾಪನೆಯನ್ನು ಮಾಡಿದವರು ಕುಟುಂಬಿಯಾದ ಆಚಾರ್ಯ ದಂಪತಿಗಳನ್ನು ಪೂಜೆ ಮಾಡಬೇಕು. ಹಾಲು ಕರೆಯುವ ಹಸು ಮತ್ತು ಕರುವನ್ನು ದಾನಮಾಡಿ, ಧಾರಾಳವಾಗಿ ದಕ್ಷಿಣೆಕೊಟ್ಟು ಸತ್ಕರಿಸಬೇಕು. ಉಳಿದ ಬ್ರಾಹ್ಮಣರಿಗೆ ತಮ್ಮ ಶಕ್ತಿಯಂತೆ ದಾನಧರ್ಮಗಳನ್ನು ಮಾಡಬೇಕು. ನಂತರ ಬ್ರಾಹ್ಮಣರು, ಬಂಧು-ಮಿತ್ರರು, ಸುವಾಸಿನಿಯರ ಸಹಿತ ಊಟ ಮಾಡಬೇಕು. ಈ ರೀತಿಯಾಗಿ ಶ್ರೀ ಸತ್ಯನಾರಾಯಣಸ್ವಾಮಿ ವ್ರತವನ್ನೂ ಮತ್ತು ಉದ್ಯಾಪನೆಯನ್ನೂ ಮಾಡಿದವರು ಶ್ರೀ ಸತ್ಯನಾರಾಯಣಸ್ವಾಮಿಯ ಕೃಪೆಗೆ ಪಾತ್ರರಾಗಿ ಸಕಲ ಸುಖಗಳನ್ನೂ ಹೊಂದಿ ಸುಖಿಸುವರು ಎಂಬಲ್ಲಿಗೆ -

ಶ್ರೀ ಸತ್ಯನಾರಾಯಣಸ್ವಾಮಿ ಉದ್ಯಾಪನೆ ಸಂಪೂರ್ಣಂ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಸತ್ಯನಾರಾಯಣ ವ್ರತದ ಹಾಡು

ಸತ್ಯಾತ್ಮಕ ಲಕ್ಷ್ಮೀಕಾಂತ ಮುಕುಂದ ಪಾಲಿಸು ಗೋವಿಂದಾ ||ಪ||
ನಿತ್ಯಸುರತರು ಕಾಮಧೇನುಮಣಿ ದೈತ್ಯಕುಲಾಂತಕ ಶ್ರೀ ನಾರಾಯಣ ||ಅ.ಪ.||
ಆ ನಾರದವಚನದಿ ಕಷ್ಟವತಿಳಿದು ನರಕಶ್ಚಿತ್ ಜನರ ಬವಣೆಯ ನೀಗಲು
ಸೋಹಿಯನೆಂದು ದೀನಜನಾವನ ಅರುಹಿದೆಯೋ ಪುರುಷೋತ್ತಮನೆ || 1

ವಾರಣಾಸಿಯಲ್ಲಿರೆ ವಿಪ್ರನು ಬಡವ ಕರುಣಾಕರ ಸಾಧುವೇಷದಿ ಬಂದು
ವ್ರತವ ಪೇಳಲು ಅವನದ ಮಾಡೆ ಘೋರದರಿದ್ರರ ಬವಣೆಯು ನೀಗಿತು
ಭೂರಿ ಸುಖ ಆತನಿಗೊದಗಿತು || 2

ಕಾಷ್ಟವ ಮಾರುವ ಶೂದ್ರನು ತಾನು ಈ ವ್ರತವನು ಮನದಲಿ ಮಾಡೆ
ಶ್ರೇಷ್ಠವೆಂದರಿತು ಅವನದ ಮಾಡಿ ಕಷ್ಟ ಪರಂಪರೆ ಬಿಟ್ಟಿತು ಅವಗೆ
ಉತ್ಕೃಷ್ಟ ಸರ್ವಸುಖ ಕೈ ಸೇರಿತು ಅವಗೆ || 3

ಸಾಧು ತಾನೀವ್ರತಮಾಡುವೆನೆಂದು ಮಾಡದೇ ಇರಲಾಗ ಬಾಧೆಗಳು
ಬಂದವು ಬಹು ವಿಧವಾಗಿ ಮಾಧವ ಪೂಜೆಯ ಮಾಡಲು ಕಡೆಗವ
ಕ್ರೋಧವ ಕಳೆದತಿ ಮೋದವ ಹೊಂದಿದ || 4

ರಾಘವ ಹೊಂದಿದ ಪೂಜಾಫಲದಿ ನಿಜಕಾಂತೆಯ ಶೀಘ್ರದಲಿ ಆ ರಾಜಗೆ
ಸಂತತಿಯಾಗದಿರೆ ಪೌರರು ಈ ವ್ರತವಮಾಡೆನೆ ಫಲದಿಂ ಮಾರುಪಿತ
ಸಂತಾನವಿತ್ತ || 5

ಗೋಪಾಲಕರಮಂಡಲಿ ವ್ರತವನು ಕಾನನದೊಳು ಮಾಡುತ್ತಿರೆ ಭೂಪಾಲನು
ಬಂದನು ಬೇಟೆಯಿಂದ ನಮಿಸದೆ ಸತ್ಯಕೆ ಬಹುವೇದನೆ ಹೊಂದಲು ಅಪರಾಧವ
ಬಹುಕ್ಷಮಿಸಬೇಕೆನ್ನಲು ಕೃಪೆಯಿಂದೀಶನು ಮೋದವ ಹೊಂದಿದ || 6

ಮಂಗಳ ಸತ್ಯಸ್ವಾಮಿ ಪರೇಶ ದುರಿತ ಅಘನಾಶ ಸಂಗೀತಪ್ರಿಯ
ಸಮ್ಮಾನಿತೋಷ ಗಂಗಾಜನಕ ಪಾದಾಂಬುಜ ಭವಭಯನಾಶ || 7

****

Sri Vidyabharathi Book Centre, Sringeri

CC-O. In Public Domain. Digitized by eGangotri

ನಮ್ಮ ಸಂಸ್ಥೆಯ ಉಪಯುಕ್ತ ಪ್ರಕಟಣೆಗಳು

- ಸಟೀಕಾ ವ್ರತರತ್ನಂ
- ವರಸಿದ್ಧಿ ವಿನಾಯಕ ವ್ರತ
- ಸ್ವರ್ಣಗೌರೀ ವ್ರತ
- ಮಂಗಳಗೌರೀ ವ್ರತ
- ವರಮಹಾಲಕ್ಷ್ಮೀ ವ್ರತ
- ಗಜಗೌರೀ ವ್ರತ
- ಸಂಕಷ್ಟಹರ ಚತುರ್ಥೀ ವ್ರತ
- ಸಂತೋಷೀಮಾತಾ ವ್ರತ
- ನಿತ್ಯಗೌರೀಪೂಜಾ
- ದೇವತಾರ್ಚನೆ
- ಯಜುರ್ವೇದ ನಿತ್ಯಕರ್ಮ
- ಋಗ್ವೇದ ನಿತ್ಯಕರ್ಮ
- ಸಾಮವೇದ ಸಂಧ್ಯಾವಂದನೆ
- ತ್ರಿಚಕಲ್ಪ ಸೂರ್ಯನಮಸ್ಕಾರ
- ಶಿವಾನಂದ ಲಹರಿ - ಅರ್ಥಸಹಿತ
- ಶ್ರೀ ಅನಂತಪದ್ಮನಾಭವ್ರತ
- ವೈಭವಲಕ್ಷ್ಮೀವ್ರತ
- ಅಂತರ್ಯಾಮಿ
- ಅಷ್ಟೋತ್ತರ ರತ್ನಮಾಲಾ
- ಪ್ರಮುಖ ಅಷ್ಟೋತ್ತರಗಳು
- 21ಅಷ್ಟೋತ್ತರಗಳು
- ಗಾಯತ್ರೀ ಶಕ್ತಿಕವಚ
- ಮಹಾಲಕ್ಷ್ಮೀ ಕವಚ
- ನಾರಾಯಣ ಕವಚ
- ಶಿವಕವಚ -ಇಂದ್ರಾಕ್ಷೀ ಸ್ತೋತ್ರ
- ಗಾಯತ್ರೀ ಚಾಲೀಸಾ
- ದೇವತಾ ಸ್ತೋತ್ರಗಳು
- ನಿತ್ಯಪ್ರಾರ್ಥನಾ-ಸ್ತೋತ್ರ ಸಂಕಲನ
- ಪುಟಾಣಿ ಸ್ತೋತ್ರಗಳು
- ವೇಂಕಟೇಶ ಸುಪ್ರಭಾತ
- ಮೃತ್ಯುಂಜಯ ಸ್ತೋತ್ರಾಣಿ
- ಗಾಯತ್ರೀ ನಿತ್ಯಪೂಜಾವಿಧಾನ
- ನವಗ್ರಹ ಜಪವಿಧಿ
- ಸೌಂದರ್ಯ ಲಹರಿ - ಅರ್ಥಸಹಿತ
- ಸ್ವಸ್ತಿಪುಣ್ಯಾಹವಾಚನಪ್ರಯೋಗ
- ಪ್ರಾತಃಸ್ಮರಾಮಿ - ಅರ್ಥಸಹಿತ
- ಸಸ್ವರ ಶ್ರೀಸೂಕ್ತಮ್ "
- ಸಸ್ವರ ಪುರುಷಸೂಕ್ತಮ್ "
- ಶ್ರೀ ಗಾಯತ್ರೀ ಸಂಪುಟ
- ಸಸ್ವರ ಮಂತ್ರಪುಷ್ಪ
- ಹೋಮ ಸಂಪುಟ - 28 ವಿವಿಧ ಹೋಮಗಳು

******

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-0. I... main. Di... by eGangotri

ಬಿ.ಎನ್. ಕೃಷ್ಣಯ್ಯಶೆಟ್ಟಿ ಅಂಡ್ ಸನ್

ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು

234, ಚಿಕ್ಕಪೇಟೆ, ಬೆಂಗಳೂರು : 560 053

ಸ್ಥಾಪನ : 1910

ದೂ : 080-2225 8217 • ಮೊ : 98802 25598

SRI SATHYANARAYANA VRATHA ₹40.00

ಇದೀಗ ಬನಶಂಕರಿ 2ನೇ ಹಂತದಲ್ಲಿ ನಮ್ಮ ಶಾಖೆ

Sri Vidyabharathi Book Centre, Sringeri

Designed & Printed at : Sree Venkateshwara Printing Press
I.G.Circle, Bengaluru : 560 078 Tel : 080-2244 4763